ನಿಮ್ಮ ನಂಬಿಕೆಯ ಧ್ವನಿ

# ಧೈರ್ಯದ ದಾರಿ

EMAIL : dairyadadaari@gmail.com ಸಂಪುಟ: 01 ಸಂಚಿಕೆ: 77

ಬೆಲೆ ರೂ : 2.00

ರಾಯಚೂರು

ಪುಟ: 4

ಸಂಪಾದಕರು : ಸೈಯದ್ ಅಹ್ಮದ್ ಹುಸೇನಿ ಮತವಾಲೆ

Cell : 6360866626, 9036887793

KANNADA DAILY NEWS PAPER

ಕನ್ನಡ ದಿನಪತ್ರಿಕೆ

DAIRYADA DAARI

RNI NO: KNKAN/25/A2795 ಶುಕ್ರವಾರ: 27-02-2026

**SEHRI & IFTARI TIME**

**DAY FRIDAY**

**RAMZAN : 09**

**DATE: 27.02.2026**

**END TIME OF SEHRI :5:24 AM**

**FAJAR AZAAN : 5:29 AM**

**IFTAR TIME : 6:30 PM**

ಸೈಯದ್ ಅಹ್ಮದ್ ಹುಸೇನಿ ಮತ್ ವಾಲೆ ಕಾರ್ಯದರ್ಶಿಗಳು : ಮತ್ ವಾಲೆ ಸಾಹೇಬ್ ಪಬ್ಲಿಕ್ ಸ್ಕೂಲ್ ಮಾನ್ವಿ ಸಂಪಾದಕರು : ಧೈರ್ಯದ ದಾರಿ ಕನ್ನಡ ದಿನಪತ್ರಿಕೆ



ಸುದ್ದಿ ಮತ್ತು ಜಾಹೀರಾತಿಗಾಗಿ ಸಂಪರ್ಕಿಸಿ

6360866626

## ನಾನು ಸಿಎಂ ಹುದ್ದೆಗೆ ಲಾಬಿ ಮಾಡುತ್ತಿಲ್ಲ : ಪರಮೇಶ್ವರ್

**ಬೆಂಗಳೂರು,ಫೆ.26–** ಮುಖ್ಯಮಂತ್ರಿ ಹುದ್ದೆಗಾಗಿ ಯಾವುದೇ ಲಾಬಿಯನ್ನು ಮಾಡುತ್ತಿಲ್ಲ ಎಂದು ಗೃಹಸಚಿವ ಡಾ.ಜಿ.ಪರಮೇಶ್ವರ್ ಇಂದಿಲ್ಲಿ ತಿಳಿಸಿದರು. ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಪಕ್ಷದ ಹೈಕಮಾಂಡ್ ಭೇಟಿಯಾ ಗಲು ದೆಹಲಿಗೂ ಹೋಗುತ್ತಿಲ್ಲ.

ರಾಜ್ಯದಲ್ಲಿ ನಾಯಕತ್ವ ಬದಲಾವಣೆಗೆ ಸಂಬಂಧಿಸಿದಂತೆ ಹೆಚ್ಚು ಗೊಂದಲವನ್ನೂ ಮಾಡುವುದಿಲ್ಲ ಎಂದು ಸ್ಪಷ್ಟಪಡಿಸಿದರು.ನಾಯಕತ್ವ ಬದಲಾವಣೆ ಕುರಿತಂತೆ ಹೆಚ್ಚು ವ್ಯಾಖ್ಯಾನ ಮಾಡುವುದರಿಂದ ಯಾವುದೇ ಉತ್ತರ ಸಿಗುವುದಿಲ್ಲ. ಹೈಕಮಾಂಡ್ ಯಾವ ಸಂದರ್ಭದಲ್ಲಿ ಯಾವ ತೀರ್ಮಾನವನ್ನು ಕೈಗೊಳ್ಳಬೇಕೋ ಅದನ್ನು ಕೈಗೊಳ್ಳುತ್ತದೆ. ಈ ಬಗ್ಗೆ ಚರ್ಚೆ ಮಾಡಿದರೆ ಉಪಯೋಗವಿಲ್ಲ ಎಂದು ಹೇಳಿದರು.

ತಮ ಅಭಿಮಾನಿಗಳು, ಹಿತೈಷಿಗಳು ಕಾರ್ಯಕ್ರಮಗಳಲ್ಲಿ ಭಾಗಿಯಾದ ಸಂದರ್ಭದಲ್ಲಿ ಘೋಷಣೆಗಳನ್ನು ಕೂಗುತ್ತಾರೆ. ಅವರು ಅಪೇಕ್ಷೆ ಪಡುತ್ತಾರೆ. ಅವರ ಭಾವನೆಯನ್ನು ವ್ಯಕ್ತಪಡಿಸುತ್ತಾರೆ. ಅದನ್ನು ತಡೆಯಲಾಗುವುದಿಲ್ಲ. ಈಗಾಗಲೇ ಆ ರೀತಿ ಭಾವನೆ ವ್ಯಕ್ತಪಡಿಸದಂತೆ ಅಭಿಮಾನಿಗಳು, ಹಿತೈಷಿಗಳಿಗೆ ಹೇಳಿದ್ದೇನೆ. ಆದರೂ ಅವರು ಮಾಡುತ್ತಿದ್ದಾರೆ. ನಾಯಕತ್ವದ ಗೊಂದಲಕ್ಕೆ ಕೈ ಜೋಡಿಸುವುದಿಲ್ಲ ಎಂದರು.

**ಗಂಭೀರವಾಗಿ ಪರಿಗಣನೆ :** ರಾಜ್ಯದಲ್ಲಿ ನಾಪತ್ತೆ ಪ್ರಕರಣಗಳನ್ನು ಗಂಭೀರವಾಗಿ ಪರಿಗಣಿಸಲಾಗಿದೆ. ಜಿಲ್ಲೆ ಮತ್ತು ರಾಜ್ಯ ಮಟ್ಟದ ಸಭೆಗಳಲ್ಲಿ ಈ ವಿಚಾರದ ಬಗ್ಗೆ ಗಂಭೀರ ಚರ್ಚೆ ಪರಿಶೀಲನೆಗಳನ್ನು ಮಾಡಲಾಗಿದೆ. ಬಹಳಷ್ಟು ಪ್ರಕರಣಗಳಲ್ಲಿ ಮಕ್ಕಳು ಪತ್ತೆಯಾಗಿದ್ದಾರೆ ಎಂದು ಪರಮೇಶ್ವರ್ ತಿಳಿಸಿದರು. ಸ್ವಯಂ ಘೋಷಿತ ದೇವಮಾನವ ಮಲ್ಲಿಕಾರ್ಜುನ ಮುತ್ಯ ಮೇಲಿನ ಆರೋಪದ ಬಗ್ಗೆ ಹೆಚ್ಚಿನ ಮಾಹಿತಿ ಇಲ್ಲ. ಆ ಬಗ್ಗೆ ವರದಿ ಪಡೆಯಲಾಗುವುದು ಎಂದು ಅವರು ಇದೇ ಸಂದರ್ಭದಲ್ಲಿ ತಿಳಿಸಿದರು.

ಬಾಂಗ್ಲಾ ದೇಶ ಸೇರಿದಂತೆ ವಿದೇಶಗಳಿಂದ ಆಗಮಿಸಿ ವೀಸಾ ಅವಧಿ ಮುಗಿದರೂ ಇಲ್ಲೇ ಇರುವವರನ್ನು ಹುಡುಕಲಾಗುತ್ತಿದೆ. ಒಮೆ ಬಂದವರು ಮತ್ತೆ ಅವರ ದೇಶಗಳಿಗೆ ವಾಪಸ್ಸಾಗಿರುವ ಬಗ್ಗೆ ವಲಸೆ ವಿಭಾಗದಲ್ಲಿ ಮಾಹಿತಿ ಇರುವುದಿಲ್ಲ. ಅಂತವರನ್ನು ಹುಡುಕಲಾಗುತ್ತಿದೆ. ಅಲ್ಲದೆ ಬಾಂಗ್ಲಾದಿಂದ ಅಕ್ರಮವಾಗಿ ಬಂದಿದ್ದಾರೆ. ಗುರುತಿನ ಚೀಟಿಯನ್ನು ಮಾಡಿಸಿಕೊಂಡಿದ್ದಾರೆ. 15 ರಿಂದ 20 ಲಕ್ಷ ಇರಬಹುದು ಎಂಬ ಮಾತುಗಳು ಕೇಳಬಂದಿದ್ದು, ಈ ವಿಚಾರ ಸದನದಲ್ಲೂ ಚರ್ಚೆಯಾಗಿದ್ದು, ಅಂತವರನ್ನು ಹುಡುಕುವುದಾಗಿ ಭರವಸೆ ನೀಡಿದ್ದೆ ಎಂದರು.

ಅಕ್ರಮವಾಗಿ ನೆಲೆಸಿರುವ ವಿದೇಶಿಗರನ್ನು ಪತ್ತೆ ಹಚ್ಚಲು



ಆಂದೋಲನ ಮಾಡಲಾಗುತ್ತಿದೆ. ಬೆಂಗಳೂರಿನಲ್ಲೂ ಅನಧಿಕೃತವಾಗಿ ಇರುವವರನ್ನು ಹುಡುಕಲಾಗುತ್ತಿದೆ. ಅವರು ಹೊಂದಿರುವ ಗುರುತಿನ ಚೀಟಿ ನಕಲಿಯೋ, ಅಸಲಿಯೋ ಎಂಬುದನ್ನು ಪರಿಶೀಲಿಸಲಾಗುತ್ತದೆ ಎಂದು ಅವರು ತಿಳಿಸಿದರು.

**ಹಂತಹಂತವಾಗಿ ಖಾಲಿ ಹುದ್ದೆ ಭರ್ತಿ :** 2ನೇಪುಟಕ್ಕೆ

## ಚಿಕಲಪರ್ವಿಯಲ್ಲಿ ಆರೋಗ್ಯ ಉಪಕೇಂದ್ರ ಪಾಳು ತಹಶೀಲ್ದಾರರಿಗೆ ದಲಿತ ಸೇನೆಯಿಂದ ಮನವಿ



ಧೈರ್ಯದ ದಾರಿ

**ಮಾನ್ವಿ :** ತಾಲೂಕಿನ ಚಿಕಲಪರ್ವಿ ಗ್ರಾಮದಲ್ಲಿ ಕೆ.ಕೆ.ಆರ್.ಡಿ.ಬಿ. (ಮೈಕೋ) ಯೋಜನೆಯಡಿ ನಿರ್ಮಿಸಲಾದ ಆರೋಗ್ಯ ಉಪಕೇಂದ್ರ ಮತ್ತು ಆರೋಗ್ಯ & ಕ್ಷೇಮ ಕೇಂದ್ರ ಕಾರ್ಯನಿರ್ವಹಿಸದೇ ಪಾಳು ಬಿದ್ದಿರುವ ಹಿನ್ನೆಲೆಯಲ್ಲಿ ದಲಿತ ಸೇನೆಯ ಅಲ್ಪಸಂಖ್ಯಾತರ ಘಟಕದ ಜಿಲ್ಲಾಧ್ಯಕ್ಷರಾದ ತಾಜುದ್ದೀನ್ ಚಿಕಲಪರ್ವಿ ಅವರು ಮಾನ್ವಿ ತಹಶೀಲ್ದಾರರ ಕಚೇರಿಯಲ್ಲಿ ಗ್ರೇಡ್-2 ತಹಶೀಲ್ದಾರರಾದ ಅಬ್ದುಲ್ ವಾಹಿದ್ ಅವರಿಗೆ ಮನವಿ ಪತ್ರ ಸಲ್ಲಿಸಿ ಮಾತನಾಡಿದರು.

ಈ ಸಂದರ್ಭದಲ್ಲಿ ಮಾತನಾಡಿದ ಅವರು, ಗರ್ಭಿಣಿಯರಿಗೆ ಸೂಕ್ತ ಚಿಕಿತ್ಸೆ ಹಾಗೂ ಸುರಕ್ಷಿತ ಹೆರಿಗೆ ನೀಡುವ ಉದ್ದೇಶದಿಂದ ನಿರ್ಮಿಸಲಾದ ಆರೋಗ್ಯ ಕೇಂದ್ರ ಉದ್ಘಾಟನೆಯಾದ ಕೆಲವೇ ದಿನಗಳಲ್ಲಿ ಕಾರ್ಯನಿರ್ವಹಣೆ ನಿಲ್ಲಿಸಿ ನಿರ್ಲಕ್ಷ್ಯಕ್ಕೊಳಗಾಗಿದೆ. ಇದರಿಂದ ಕಟ್ಟಡ ಪಾಳು ಬಿದ್ದಿದ್ದು, ಸ್ಥಳೀಯರು ಮಲಮೂತ್ರ ವಿಸರ್ಜನೆ ಮಾಡುವ ಸ್ಥಳವಾಗಿದ್ದು, ಆಸ್ಪತ್ರೆಯಲ್ಲಿದ್ದ ಕೆಲವು ಪರಿಕರಗಳು, ವಿದ್ಯುತ್ ಮತ್ತು ಸೋಲಾರ್ ಸಾಮಾಗ್ರಿಗಳು ಕಳುವಾಗಿರುವುದು ವಿಷಾದನೀಯ ಎಂದು ಹೇಳಿದರು.

ಆರೋಗ್ಯ ಕೇಂದ್ರ ಕಾರ್ಯನಿರ್ವಹಿಸದ ಕಾರಣ ಗರ್ಭಿಣಿಯರು, ಹಿರಿಯ ನಾಗರಿಕರು ಹಾಗೂ ಸ್ಥಳೀಯ ರೋಗಿಗಳು ಸಮೀಪದಲ್ಲೇ ಚಿಕಿತ್ಸೆ ಪಡೆಯಲು ಸಾಧ್ಯವಾಗದೆ ತೀವ್ರ ತೊಂದರೆ ಅನುಭವಿಸುತ್ತಿದ್ದಾರೆ. ಆದ್ದರಿಂದ ಸಂಬಂಧಪಟ್ಟ ಅಧಿಕಾರಿಗಳು ಸ್ಥಳ ಪರಿಶೀಲನೆ ನಡೆಸಿ, ಆರೋಗ್ಯ ಉಪಕೇಂದ್ರ ಮತ್ತು ಆರೋಗ್ಯ & ಕ್ಷೇಮ ಕೇಂದ್ರವನ್ನು ಮರುಪ್ರಾರಂಭಿಸಿ ಕಟ್ಟಡದ ರಕ್ಷಣೆಗಾಗಿ ಸೂಕ್ತ ಕ್ರಮ ಕೈಗೊಳ್ಳುವಂತೆ ಅವರು ತಹಶೀಲ್ದಾರರಿಗೆ ಮನವಿ ಮಾಡಿದರು.

## ತಾಯಿ, ಮಕ್ಕಳ ಆರೈಕೆಗೆ ಜಿಲ್ಲಾಧಿಕಾರಿಗಳ ಸೂಚನೆಯಂತೆ ದೇವದುರ್ಗಕ್ಕೆ ಪ್ರಸೂತಿ ತಜ್ಞರ ನೇಮಕ

ಧೈರ್ಯದ ದಾರಿ

**ರಾಯಚೂರು ಫೆ,26–** ಕಲ್ಯಾಣ ಕರ್ನಾಟಕ ಭಾಗದಲ್ಲಿ ಪ್ರಸೂತಿ ಆರೈಕೆ ಸೇವೆಗೆ ಹೆಚ್ಚಿನ ಮಹತ್ವ ನೀಡುತ್ತಿರುವ ಕರ್ನಾಟಕ ಸರಕಾರದ ದೂರ ದೃಷ್ಟಿಯನ್ನು ಹೊಂದಿದ ಹಿನ್ನಲೆ ಹಾಗೂ ಮಹತ್ವಾಕಾಂಕ್ಷಿ ಸಂಪೂರ್ಣತಾ ಯೋಜನೆಯಡಿ ಜಿಲ್ಲೆಯು ಇರುವ ಕಾರಣದಿಂದಾಗಿ ಜಿಲ್ಲೆಯಲ್ಲಿ ತಾಯಿ ಮಕ್ಕಳ ಸುರಕ್ಷತೆಗಾಗಿ ಜಿಲ್ಲೆಯ ಜಿಲ್ಲಾಧಿಕಾರಿಗಳಾದ ನಿತೀಶ್ ಕೆ. ಅವರು ಅವರು ಖುದ್ದು ಒತ್ತಾಸೆ ಹಾಗೂ ಮುತವರ್ಜಿ



ವಹಿಸಿ ಜಿಲ್ಲೆಯ ದೇವದುರ್ಗ ತಾಲೂಕಿಗೆ ಸೇವಾ ನಿರತ ಹಾಗೂ ಸ್ನಾತಕೋತ್ತರ ಪದವಿ ಪೂರ್ಣಗೊಳಿಸಿ ಸ್ಥಳ ನಿಯುಕ್ತಿಗಾಗಿ ಕಾಯುತ್ತಿದ್ದ ಇಬ್ಬರೂ ಪ್ರಸೂತಿ ತಜ್ಞರನ್ನು ನೇಮಕ ಮಾಡಿಸುವ ಮೂಲಕ ದೇವದುರ್ಗ ತಾಲೂಕಿನ ಗ್ರಾಮೀಣ ಭಾಗದ ಜನತೆಯು ಹೆರಿಗೆಗಾಗಿ ರಾಯಚೂರಿಗೆ ಅಲೆಯುವುದನ್ನು ನಿಲ್ಲಿಸಿದ್ದಾರೆ ಎಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿ ಡಾ ಸುರೇಂದ್ರ ಬಾಬು ಅವರು ತಿಳಿಸಿದ್ದಾರೆ. 2ನೇಪುಟಕ್ಕೆ ▸

## ರೈತರಿಗೆ ಯಾವುದೇ ತೊಂದರೆಯಾಗದಂತೆ ನೋಡಿಕೊಳ್ಳಿ: ಜಿಲ್ಲಾಧಿಕಾರಿ ನಿತೀಶ್ ಕೆ.

ಧೈರ್ಯದ ದಾರಿ

**ರಾಯಚೂರು ಫೆ,26–** ಕನಿಷ್ಠ ಬೆಂಬಲ ಬೆಲೆ ಯೋಜನೆಯ ಡಿಯಲ್ಲಿ ರೈತರಿಂದ ಬಿಳಿಜೋಳ ಉತ್ಪನ್ನವನ್ನು ಖರೀದಿಸಲು ಬೆಂಬಲ ಬೆಲೆ ನಿಗದಿಪಡಿಸಲಾಗಿದೆ. ಖರೀದಿ ಸಮಯದಲ್ಲಿ ರೈತರಿಗೆ ಯಾವುದೇ ರೀತಿಯ ತೊಂದರೆಯಾಗದಂತೆ ಕ್ರಮವಹಿಸಬೇಕೆಂದು ಜಿಲ್ಲಾಧಿಕಾರಿಗಳಾದ ನಿತೀಶ್ ಕೆ. ಅವರು ಸಂಬಂಧಿಸಿದ ಅಧಿಕಾರಿಗಳಿಗೆ ಸೂಚನೆ ನೀಡಿದರು.



ಇತ್ತೀಚೆಗೆ ನಗರದ ನೂತನ ಜಿಲ್ಲಾಧಿಕಾರಿಗಳ ಕಚೇರಿಯ ಸಭಾಂಗಣದಲ್ಲಿ ಹಮ್ಮಿಕೊಳ್ಳಲಾಗಿದ್ದ ಜೋಳ ಖರೀದಿ ಕುರಿತು ಜಿಲ್ಲಾ ಟಾಸ್ಕ್‌ಫೋರ್ಸ್ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಈಗಾಗಲೇ ಸರ್ಕಾರದ ನಿರ್ದೇಶನ ಮತ್ತು ಜಿಲ್ಲಾಡಳಿತದಿಂದ ನಿಗಧಿಪಡಿಸಲಾಗಿರುವ ಮಾನದಂಡಗಳನ್ವಯ ಈಗಾಗಲೇ ನೋಂದಣಿಯಾಗಿರುವ ಅಥವಾ ನೋಂದಣಿಯಾಗುವ ರೈತರಿಂದ ಬಿಳಿಜೋಳವನ್ನು ರೈತರಿಗೆ ಯಾವುದೇ ತೊಂದರೆಯಾಗದಂತೆ ಜಿಲ್ಲೆಯಲ್ಲಿ ಕರ್ನಾಟಕ ಆಹಾರ ಮತ್ತು ನಾಗರಿಕ ಸರಬರಾಜು ನಿಗಮ ನಿಯಮಿತ ವತಿಯಿಂದ ಖರೀದಿ ಪ್ರಕ್ರಿಯೆಯನ್ನು ಪ್ರಾರಂಭಿಸಬೇಕೆಂದರು.

ಕನಿಷ್ಠ ಬೆಂಬಲ ಬೆಲೆ ಯೋಜನೆಯಡಿ ಜೋಳ ಖರೀದಿಗೆ ಅವಶ್ಯವಿರುವ ಗೋಣಿ ಚೀಲಗಳ ಸಿದ್ದತೆಯನ್ನು ಮಾಡಿಕೊಳ್ಳಬೇಕು. ಖರೀದಿ ಕೇಂದ್ರದಲ್ಲಿ ಬಳಸುವ ಡಿಜಿಟಲ್ ತೂಕ ಮಾಪನ ಯಂತ್ರಗಳನ್ನು ಕಡ್ಡಾಯವಾಗಿ ಕಾನೂನು ಮಾಪನಶಾಸ್ತ್ರ ಇಲಾಖೆಯಿಂದ ಸ್ಟಾಂಪಿಂಗ್ ಮಾಡಿಸಿಕೊಳ್ಳುವಂತೆ ಖರೀದಿ ಕೇಂದ್ರದ ಅಧಿಕಾರಿಗಳಿಗೆ ಜಿಲ್ಲಾಧಿಕಾರಿಗಳು ಸಂಬಂಧಿಸಿದ ಅಧಿಕಾರಿಗಳಿಗೆ ಸೂಚಿಸಿದರು.ಆಯಾ ಖರೀದಿ ಕೇಂದ್ರ ವ್ಯಾಪ್ತಿಯ ಕಾನೂನು ಮಾಪನ ಶಾಸ್ತ್ರ ಇಲಾಖೆಯ ನಿರೀಕ್ಷಕರುಗಳಿಗೆ ಸಂಬಂಧಪಟ್ಟ ಖರೀದಿ ಕೇಂದ್ರದಲ್ಲಿ ಬಳಸುತ್ತಿರುವ ಡಿಜಿಟಲ್ ತೂಕ ಮಾಪನ ಯಂತ್ರಗಳನ್ನು ಸ್ಟಾಟಿಂಗ್ ಮಾಡಿಸಿರುವ ಬಗ್ಗೆ ಪರಿಶೀಲಿಸುವಂತೆ ಕಾನೂನು ಮಾಪನ ಶಾಸ್ತ್ರ ಇಲಾಖೆಯ ಸಹಾಯಕ ನಿಯಂತ್ರಕರಿಗೆ ಜಿಲ್ಲಾಧಿಕಾರಿಗಳು ಸೂಚಿಸಿದರು.

ಈ ಹಿಂದಿನ ಸಾಲಿನಲ್ಲಿ ಸಮಯಕ್ಕೆ ಸರಿಯಾಗಿ ಲಾರಿಗಳು ಖರೀದಿ ಕೇಂದ್ರಗಳಿಗೆ ಬಾರದೇ ಇರುವುದರಿಂದ ಖರೀದಿ ಪ್ರಕ್ರಿಯೆಯು ಮಂದಗತಿಯಲ್ಲಿ ಸಾಗಿದ್ದು, ಈ ಸಾಲಿನಲ್ಲಿ ಆ ರೀತಿ ಆಗದಂತೆ ನೋಡಿಕೊಳ್ಳಬೇಕು. ಕಾರ್ಯಾದೇಶದಲ್ಲಿ ನೀಡಲಾಗಿರುವ 133 ಲಾರಿಗಳಿಗೆ ಜಿಪಿಎಸ್ ಅಳವಡಿಸಿಕೊಂಡು ಈ ಸಾಲಿನಲ್ಲಿ ನಿಯಮಾನುಸಾರ ಅಗತ್ಯಕ್ಕೆ ತಕ್ಕಂತೆ ಲಾರಿಗಳ ವ್ಯವಸ್ಥೆಯನ್ನು ಮಾಡಿಕೊಂಡು ಎಲ್ಲಾ ಖರೀದಿ ಕೇಂದ್ರಗಳಿಗೆ ನೀಡುವಂತೆ ಸಂಬಂಧಿಸಿದ ಅಧಿಕಾರಿಗಳಿಗೆ ಜಿಲ್ಲಾಧಿಕಾರಿಗಳು ನಿರ್ದೇಶನ ನೀಡಿದರು.

ಈ ವೇಳೆ ಕೆಎಫ್‌ಸಿಎಸ್‌ಸಿ ಜಿಲ್ಲಾ ವ್ಯವಸ್ಥಾಪಕರಾದ ಪ್ರಕಾಶ್ ಅವರು ಮಾತನಾಡಿ, ಎಫ್‌ಸಿಐ ತನಿಖಾ ತಂಡವು ನೀಡಿರುವ ವರದಿಯಾನುಸಾರ ಹಿಂದಿನ ಸಾಲಿನಲ್ಲಿ ಹಂಚಿಕೆಯಾಗಿ ಬಳಕೆಗೆ ಯೋಗ್ಯವಿರುವ 5,53,545 ಗೋಣಿ ಚೀಲಗಳು ವಿವಿಧ ಖರೀದಿ ಕೇಂದ್ರಗಳಲ್ಲಿ ಲಭ್ಯವಿರುವುದಾಗಿ ಮತ್ತು 2.50 ಲಕ್ಷ ನೂತನ ಗೋಣಿ ಚೀಲಗಳು ಜಿಲ್ಲೆಗೆ ಹಂಚಿಕೆಯಾಗಿದ್ದು, ಅತೀ ಶಿಘ್ರದಲ್ಲಿಯೇ ಕೇಂದ್ರಗಳಿಗೆ ತಲುಪಿಸುದಾಗಿ ಸಭೆಗೆ ಮಾಹಿತಿ ನೀಡಿದರು.

ಇದೇ ಸಂದರ್ಭದಲ್ಲಿ ರಾಯಚೂರು ಸಹಾಯಕ ಆಯುಕ್ತರಾದ ಡಾ.ಹಂಪಣ್ಣ ಸಜ್ಜನ್, ಲಿಂಗಸುಗೂರು ಸಹಾಯಕ ಆಯುಕ್ತರಾದ ಬಸವಣೆಪ್ಪ ಕಲಶೆಟ್ಟಿ, ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆ ನಜೀರ್ ಅಮಹದ್, ಕೃಷಿ ಇಲಾಖೆಯ ಜಂಟಿ ನಿರ್ದೇಶಕರಾದ ಪ್ರಕಾಶ್ ಚೌವಾಣ್, ಸಹಕಾರ ಸಂಘಗಳ ಉಪ ನಿಬಂಧಕರು, ಜಿಲ್ಲೆಯ ದೇವದುರ್ಗ, ಲಿಂಗಸುಗೂರು, ಮಾನವಿ, ರಾಯಚೂರು, ಸಿಂಧನೂರು, ಮಸ್ಕಿ, ಸಿರವಾರ ತಾಲೂಕಿನ ತಹಶೀಲ್ದಾರರು,ಕರ್ನಾಟಕ ಆಹಾರ ಮತ್ತು ನಾಗರಿಕ ಸರಬರಾಜು ನಿಗಮ ನಿಯಮಿತದ ವ್ಯವಸ್ಥಾಪಕರು ಸೇರಿದಂತೆ ಇತರರು ಇದ್ದರು.

## ಸಾಮೂಹಿಕ ವಿವಾಹಗಳು ಬಡವರ ಮದುವೆ ಅಲ್ಲ ಭಾಗ್ಯವಂತರ ಮದುವೆ ; ಜಯಶಾಂತಲಿಂಗ ಶ್ರೀಗಳು

ಧೈರ್ಯದ ದಾರಿ

**ಸಿರವಾರ :**ಸಾಮೂಹಿಕ ವಿವಾಹ ಕಾರ್ಯಕ್ರಮಗಳು ಸಮಾಜಕ್ಕೆ ಒಳ್ಳೆಯ ಸಂದೇಶದ ಮಾರ್ಗವನ್ನು ತೋರುತ್ತವೆ. ಸಾಮೂಹಿಕ ವಿವಾಹ ಕಾರ್ಯಕ್ರಮಗಳಿಂದ ದುಂದು ವೆಚ್ಚಕ್ಕೆ ಕಡಿವಾಣ ಹಾಕುವ ಸಂದೇಶವಾಗಿದೆ. ಸಾಮೂಹಿಕ ವಿವಾಹಗಳಿಂದ ಜಾತ್ಯತೀತ ಮನೋಭಾವನೆಯನ್ನು ಮೂಡಿ ಸುಂದರ ಸಮಾಜವನ್ನು ನಿರ್ಮಾಣ ಮಾಡಲು ಸಹಕಾರಿಯಾಗುತ್ತದೆ. ಸಾಮೂಹಿಕ ವಿವಾಹಗಳು ಬಡವರ ಮದುವೆ ಅಲ್ಲ ಭಾಗ್ಯವಂತರ ಮದುವೆ ಎಂದು ಜಯಶಾಂತಲಿಂಗೇಶ್ವರ ಸಂಸ್ಥಾನಮಠ ಜಾಲಹಳ್ಳಿ ಶ್ರೀಗಳಾದ ಜಯಶಾಂ ತಲಿಂಗ ಶಿವಾಚಾರ್ಯ ಮಹಾಸ್ವಾಮಿಗಳು ಹೇಳಿದರು.

ಅವರು ಸಿರವಾರ ತಾಲೂಕಿನ ನವಲಕಲ್ ಗ್ರಾಮದ ಶ್ರೀ ಮಯೂರಶಿಲೆ 29 ನೇ ಜಾತ್ರಾ ಮಹೋತ್ಸವ ಪ್ರಯುಕ್ತ ಸಾಮೂಹಿಕ ವಿವಾಹಗಳ ಕಾರ್ಯಕ್ರವನ್ನು ಉದ್ಘಾಟಿಸಿ ಮಾತನಾಡಿದ ಅವರು "ಸಮ ಸಮ ಸಮಾಜವನ್ನು ನಿರ್ಮಾಣ ಮಾಡುವ ನಿಟ್ಟಿನಲ್ಲಿ ಶ್ರೀ ನವಲಕಲ್ ಮಠವು ಮುಂಚೂಣಿಯ ಸ್ಥಾನದಲ್ಲಿದೇ ಈ ಮಠದಲ್ಲಿ ಅನೇಕ ಭಕ್ತಾಧಿಗಳು ಜಾತಿ ಭೇದ ಎನ್ನದೇ ಎಲ್ಲರೂ ಒಟ್ಟಾಗಿ ಸಮಾಜಕ್ಕೆ ಒಳ್ಳೆಯ ಸಂದೇಶವನ್ನು ತಲುಪಿಸುವ ನಿಟ್ಟಿನಲ್ಲಿ ಶ್ರೀ ಮಠವು ಮಾಡುತ್ತಾ ಬರುತ್ತಿದೆ.

ನವಲಕಲ್ ಮಠವು ಸಮಾಜಕ್ಕೆ ಮಾದರಿ ಸಂಕೇತವಾಗಿದೆ. ಸಾಮೂಹಿಕ ವಿವಾಹಗಳು ಸಮಾಜಕ್ಕೆ ಮಾದರಿಯಾಗಿವೆ. ಶ್ರೀ ಮಠದಲ್ಲಿ ಮದುವೆಯಾಗುವಂತ ನವ ದಂಪತಿಗಳಾದ ನೀವುಗಳೇ ಧನ್ಯರು ಏಕೆಂದರೆ ಒಂದು ಮದುವೆ ಮಾಡಿಕೊಳ್ಳಲು ಲಕ್ಷಾಂತರ ರೂಪಾಯಿ ಖರ್ಚು ಮಾಡಿ ಮದುವೆ ಮಾಡಿಕೊಳ್ಳುತ್ತಾರೆ ದಂಪತಿಗಳಿಗೆ ಕೆಲವೇ ಕೆಲವು ವ್ಯಕ್ತಿಗಳಿಂದ ಆಶೀರ್ವಾದ ದೊರೆಯುತ್ತದೆ ಆದರೆ ಸಾಮೂಹಿಕ ವಿವಾಹಗಳಲ್ಲಿ ಎಲ್ಲಾ ಪುಣ್ಯ ಕ್ಷೇತ್ರದ ಮಹಾಸ್ವಾಮಿಗಳು ನಿಮ್ಮನ್ನು ಆಶೀರ್ವಾದ ಮಾಡಲು ಬಂದಿದ್ದಾರೆ ಆದ್ದರಿಂದ ಸಾಮೂಹಿಕ ವಿವಾಹಗಳಲ್ಲಿ ಮದುವೆ ಮಾಡಿಕೊಂಡಂತಹ ನವ ದಂಪತಿಗಳು ನೀವೇ ಧನ್ಯರು. ತಂದೆ – ತಾಯಿಗಳನ್ನು ಅತ್ತೆ– ಮಾವಂ ದಿರನ್ನು ಚನ್ನಾಗಿ ನೋಡಿಕೊಳ್ಳಿ ಸಮಾಜದಲ್ಲಿ ಗೌರವಿತ ದಂಪತಿಗಳಾಗಿ ಬದುಕನ್ನು ಕಟ್ಟಿಕೊಳ್ಳಿ ಶ್ರೀ ಮಠದ ಹೆಸರನ್ನು ಉಳಿಸಿ ಬೆಳೆಸಿ ಎಂದು ನವ ದಂಪತಿಗಳಿಗೆ ಆಶೀರ್ವಚನ ನೀಡಿದರು.

ಸಂಸ್ಥಾನ ಮಠದ ಶ್ರೀಗಳಾದ ಶ್ರೀ ಅಭಿನವ ಸೋಮ ನಾಥ ಶಿವಾಚಾರ್ಯ ಮಹಾಸ್ವಾಮಿಗಳ ನೇತೃತ್ವದಲ್ಲಿ ಶ್ರೀ ಮಯೂರಶಿಲೆಯ 29 ನೇ ಜಾತ್ರಾ ಮಹೋ ತ್ಸವದಲ್ಲಿ 29 ನವ ಜೋಡಿಗಳು ನವ ದಾಂಪತ್ಯಕ್ಕೆ ಕಾಲಿಟ್ಟರು. ವೇದಿಕೆಯ ಮೇಲೆ ಇದ್ದ ಎಲ್ಲಾ ಮಹಾ ಸ್ವಾಮಿಗಳು ಕಾರ್ಯಕ್ರಮವನ್ನು ಉದ್ದೇಶಿಸಿ ಮಾತ ನಾಡಿ ನವ ದಂಪತಿಗಳಿಗೆ ಅಕ್ಷತೆ ಕಾಳನ್ನು ಹಾಕಿ ಆಶೀರ್ವಾದ ಮಾಡಿದರು. ಜಾತ್ರಾ ಮಹೋತ್ಸವದಲ್ಲಿ ಶ್ರಮಿಸಿದ ಎಲ್ಲಾರಿಗೂ ಆಶೀರ್ವದಿಸಿ ನೆನಪಿನ ಕಾಣಿಕೆಯನ್ನು ನೀಡಿ ಗೌರವಿಸಲಾಯಿತು.

ಈ ಸಂದರ್ಭದಲ್ಲಿ ಶ್ರೀಮಠದ ಮಹಾಸ್ವಾಮಿಗಳಾದ ಅಭಿನವ ಸೋಮನಾಥ ಶಿವಾಚಾರ್ಯ ಮಹಾಸ್ವಾಮಿಗಳು ಬೃಹನ್ಮಠ



ನವಲಕಲ್, ಶಾಂತಮಲ್ಲ ಶಿವಾಚಾರ್ಯ ಮಹಾಸ್ವಾಮಿಗಳು ಕಿಲ್ಲೇ ಮಠ ರಾಯಚೂರು, ಬೂದಿಬಸವ ಶಿವಾಚಾರ್ಯ ಮಹಾಸ್ವಾಮಿಗಳು ಸಂಸ್ಥನ ಮಠ ಗಬ್ಬೂರು, ಶ್ರೀ ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮಿಗಳು ದೇವಾಪುರ, ಶ್ರೀ ಚನ್ನಮಲ್ಲ ಶಿವಾಚಾರ್ಯ ಮಹಾಸ್ವಾಮಿಗಳು ಕನಕಗಿರಿ, ಶ್ರೀ ಮಹಾಂತಲಿಂಗ ಶಿವಾಚಾರ್ಯ ಮಹಾಸ್ವಾಮಿಗಳು ಕರೇಗುಡ್ಡ, ಶ್ರೀ ಅಭಿನವ ರಾಚೋಟಿವೀರ ಶಿವಾಚಾರ್ಯ ಸ್ವಾಮೀಜಿ ಅತ್ತನೂರು– ರಾಯಚೂರು, ಶ್ರೀ ವರರುದ್ರಮುನಿ ಶಿವಾಚಾರ್ಯ ಮಹಾಸ್ವಾಮಿಗಳು ಗಚ್ಚಿನ ಮಠ ಮಸ್ಕಿ, ಶ್ರೀ ಗಜದಂಡ ಶಿವಾಚಾರ್ಯರು ದೇವರಭೂಪುರ, ಶ್ರೀ ಅಭಿನವ ಸಿದ್ದಲಿಂಗ ಮಹಾಸ್ವಾಮಿಗಳು ಕಲ್ಮಠ ಕವಿತಾಳ, ಶ್ರೀ ಮುರುಘೇಂದ್ರ ಶಿವಯೋಗಿಗಳು ಯರಡೋಣಿ, ಶ್ರೀ ಚನ್ನವೀರ ದೇವರು ಗದ್ದಗಿಮಠ ಸಿರವಾರ, ಬ್ರಹ್ಮಶ್ರೀ ವೀರಭದ್ರ ಮಹಾಸ್ವಾಮಿಗಳು ಅಂಕಲಿಮಠ, ಶ್ರೀ ಬೆಟ್ಟಪ್ಪ ತಾತ ಜಾಗಟಗಲ್, ಶ್ರೀ ಗುರುಬಸವ ಸ್ವಾಮಿ ಬಲ್ಲಟಗಿ, ಬಸಯ್ಯ ಸ್ವಾಮಿ ಬಲ್ಲಟಗಿ, ಚರಬಸವ ಸ್ವಾಮಿಗಳು ಯರಮರಸ್, ಊರಿನ ಮುಖಂಡರು, ಸುತ್ತ ಮುತ್ತಲಿನ ಗ್ರಾಮದ ಶ್ರೀ ಮಠದ ಭಕ್ತಾದಿಗಳು ಉಪಸ್ಥಿತರಿದ್ದರು.

ಮೊದಲನೇ ಪುಟದಿಂದ

# ನಾನು ಸಿಎಂ ಹುದ್ದೆಗೆ ಲಾಬಿ ಮಾಡುತ್ತಿಲ್ಲ : ಪರಮೇಶ್ವರ್

ಯುವಕರಿಗೆ ಉದ್ಯೋಗ ಸಿಗದಿರುವುದು ಗಂಭೀರವಾದ ವಿಚಾರ. ಹೆಚ್ಚು ವಿದ್ಯಾವಂತರಾಗಬೇಕೆಂದು ಉತ್ತೇಜನ ನೀಡುತ್ತೇವೆ. ಅವರಿಗೆ ಉದ್ಯೋಗ ಸಿಗಬೇಕು. ಒಳಮೀಸಲಾತಿಯಿಂದಾಗಿ ನೇಮಕಾತಿ ನಿಧಾನವಾಗಿದೆ. ಈ ಪಕ್ಷದ ಪ್ರಣಾಳಿಕೆಯಲ್ಲಿ ಹಂತಹಂತವಾಗಿ ಖಾಲಿ ಹುದ್ದೆ ಭರ್ತಿ ಮಾಡುವುದಾಗಿ ಭರವಸೆ ನೀಡಿದ್ದೆವು. ಗೃಹ ಇಲಾಖೆಯಲ್ಲಿ 17 ಸಾವಿರ ಹುದ್ದೆಗಳು ಖಾಲಿ ಇದ್ದು, ಅವುಗಳ ಭರ್ತಿಗೆ ಅನುಮತಿ ಸಿಕ್ಕಿದೆ ಎಂದರು.

ಮುಖ್ಯಮಂತ್ರಿ, ಉಪಮುಖ್ಯಮಂತ್ರಿ, ನಾವೆಲ್ಲಾ ಸೇರಿಯೇ ಪ್ರಣಾಳಿಕೆಯನ್ನು ಸಿದ್ಧಪಡಿಸಿದ್ದೇವೆ. ಪಕ್ಷದ ಅಧ್ಯಕ್ಷರಾದ ಡಿ.ಕೆ.ಶಿವಕುಮಾರ್ ಅವರು ಅವರ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಗ್ಯಾರಂಟಿಯಿಂದ ಹೊರೆಯಾಗಿದೆ ಎಂದು ಅನ್ನಿಸಿರಬಹುದು. ಅದು ಅವರ ಅಭಿಪ್ರಾಯ. ಈ ವಿಚಾರದಲ್ಲಿ ನಾವೆಲ್ಲಾ ಕೂತು ಚರ್ಚೆ ಮಾಡುತ್ತೇವೆ. ಸಂಪುಟ ಸಭೆಯಲ್ಲೂ ಈ ಬಗ್ಗೆ ಚರ್ಚೆಯಾಗಬಹುದು ಎಂದು ಅವರು ತಿಳಿಸಿದರು.

## ತಾಯಿ, ಮಕ್ಕಳ ಆರೈಕೆಗೆ ಜಿಲ್ಲಾಧಿಕಾರಿಗಳ ಸೂಚನೆಯಂತೆ ದೇವದುರ್ಗಕ್ಕೆ ಪ್ರಸೂತಿ ತಜ್ಞರ ನೇಮಕ

ಸುಸಜ್ಜಿತ ಹೆರಿಗೆ ಕೊಠಡಿ, ಅತ್ಯಾಧುನಿಕ ಉಪಕರಣಗಳು, ನುರಿತ ವೈದ್ಯರುಗಳನ್ನು ಹೊಂದಿರುವ ಜಿಲ್ಲೆಯ ಆರೋಗ್ಯ ಕೇಂದ್ರಗಳಲ್ಲಿ ಕಡು ಬಡವರಿಗೆ ಗುಣಮಟ್ಟದ ಆರೋಗ್ಯ ಸೇವೆಯನ್ನು ಅದರಲ್ಲೂ ಹೆರಿಗೆಯೆನ್ನುವ ಮಹತ್ವಪೂರ್ಣ ಸನ್ನಿವೇಶದಲ್ಲಿ ಯಾವುದೇ ತೊಂದರೆಯಾಗದಂತೆ ಹೆರಿಗೆ ನಿರ್ವಹಿಸುವ ಜವಾಬ್ದಾರಿಯನ್ನು ಜಿಲ್ಲೆಯಲ್ಲಿ ಮಾಡಲಾಗುತ್ತಿದೆ. ಅಲ್ಲದೆ ತಕ್ಷಣವೇ ಶಸ್ತ್ರಚಿಕಿತ್ಸೆ ಕೈಗೊಳ್ಳುವ ಜವಾಬ್ದಾರಿಯ ನಿರ್ವಹಣೆಗಾಗಿ ಜಿಲ್ಲಾ ಆರ್.ಸಿ. ಹೆಚ್ ಅಧಿಕಾರಿ ಡಾ.ನಂದೀತಾ ಎಮ್.ಎನ್. ಅವರು ಸ್ಥಳ ನಿಯುಕ್ತಿಗೊಂಡ ಹಿರಿಯ ತಜ್ಞವೈದ್ಯರಾದ ಡಾ.ಪು ಷ್ಪಲತಾ ಹಾಗೂ ಡಾ.ರವಿಕಿರಣ್ ಅವರೊಂದಿಗೆ ಜೊತೆಗೂಡಿ ಸಂವಹನ ಕೈಗೊಂಡಿದ್ದು, ಫೆ.24ರಂದು ಪ್ರಸೂತಿ ತಜ್ಞರಾದ ಡಾ.ರವಿಕಿರಣ್ ಹಾಗೂ ತಂಡವು ಎರಡು ಶಸ್ತ್ರಚಿಕಿತ್ಸಾ ಹೆರಿಗೆ ಯನ್ನು ಕೈಗೊಂಡಿದ್ದು, ತಾಯಿ ಮಗು ಆರೋಗ್ಯವಾಗಿದ್ದಾರೆ.

ದೇವದುರ್ಗ ತಾಲೂಕಿನ ಜನತೆ ಹೆರಿಗೆಗಾಗಿ ರಾಯಚೂರುಗೆ ಬರುವ ಸಮಯದ ಉಳಿತಾಯ ಮಾಡುವ ಹಾಗೂ ತಾಯಿ ಮಗುವಿನ ಸುರಕ್ಷತೆಗೆ ಒಂದು ಹೆಜ್ಜೆ ಮುಂದಿಟ್ಟಂತಾಗಿದು, ಸಾರ್ವಜನಿಕರು ಇದರ ಪಡೆಯುವಂತೆ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಅಧಿಕಾರಿಗಳಾದ ಡಾ.ಸುರೇಂದ್ರ ಬಾಬು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಬಡ ರೋಗಿಗಳ ಜೀವನದ ಜೊತೆ ಆಟವಾಡುತ್ತಿರುವ ಖಾಸಗಿ ಆಂಬುಲೆನ್ಸ್ ಗಳಿಗೆ ಕಡಿವಾಣ ಹಾಕಿ



ಧೈರ್ಯದ ದಾರಿ

**ರಾಯಚೂರು :–** ವೈದ್ಯಕೀಯ ವಿಜ್ಞಾನಗಳ ಸಂಸ್ಥೆ (ರಿಮ್ಸ್ ) ನ ಆವರಣದಲ್ಲಿ ರಾಜಾರೋಷವಾಗಿ ನಡೆಯುತ್ತಿರುವ ಖಾಸಗಿ ಆಂಬುಲೆನ್ಸ್ ದರ್ಬಾರಿಗೆ ಕಡಿವಾಣ ಹಾಕಬೇಕು ಎಂದು ವಿವಿಧ ಸಂಘಟನೆಗಳ ಪದಾಧಿಕಾರಿಗಳು ಆಗ್ರಹಿಸಿದ್ದಾರೆ.ಸರ್ಕಾರವು ಬಡಜನರ ಸೇವೆಗೆಂದು ಆಸ್ಪತ್ರೆಯ ಆವರಣದಲ್ಲಿ ಉಚಿತವಾಗಿ ಆಂಬುಲೆನ್ಸ್ ಸೇವೆ ಒದಗಿಸುತ್ತಿದ್ದರೂ ಸಹ ಖಾಸಗಿ ಆಂಬುಲೆನ್ಸ್ ವಾಹನದ ಹೆಸರಿನಲ್ಲಿ ಇಮ್ರಾನ್ ಹಾಗೂ ಆತನ ಸಹೋದರನಾದ ಇರ್ಫಾನ್ ಪಟಾಣ್ ಇವರಿಬ್ಬರೂ ರೋಗಿಗಳ ಹೆಸರಿನಲ್ಲಿ ಹಗಲುದರೋಡೆ ಮಾಡುತ್ತಿದ್ದಾರೆ ಎಂದು ಅವರು ಆರೋಪಿಸಿದ್ದಾರೆ.

ಇಮ್ರಾನ್ ಎಂಬುವವರು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಲ್ಲಿ ನಗು–ಮಗು ಆಂಬುಲೆನ್ಸ್ ಚಾಲಕನೆಂದು ನೇಮಕಗೊ ಂಡಿದ್ದು ಇರುತ್ತದೆ. ಆದರೆ, ಈ ಆಂಬುಲೆನ್ಸ್ ವಾಹನವು ದುರಸ್ತಿಗೊಂಡು ಸರಿಸುಮಾರು 2 ವರ್ಷಗಳೇ ಗತಿಸಿವೆ ಎಂದು ಅವರು ಹೇಳಿದ್ದಾರೆ.ಈ ಕುರಿತಂತೆ ಮಾನ್ಯ ಜಿಲ್ಲಾ ಆರೋಗ್ಯಾಧಿಕಾರಿಗಳಿಗೆ ಮನವಿ ಸಲ್ಲಿಸಲಾಗಿದ್ದು, ಸದರಿ ಮನವಿಗೆ ಸ್ಪಂದಿಸಿದ ಮಾನ್ಯ ಅಧಿಕಾರಿಗಳು ರಿಮ್ಸ್ ಆಸ್ಪತ್ರೆಯಲ್ಲಿ ಖಾಸಗಿ ಆಂಬುಲೆನ್ಸ್ ಗಳ ತೆರವಿಗೂ ನಮಗೂ ಯಾವುದೇ ರೀತಿಯ ಸಂಬಂಧಗಳು ಇರುವುದಿಲ್ಲ ಎಂದು ತಿಳಿಸಿರುತ್ತಾರೆ. ಇದನ್ನ ಗಂಭೀರವಾಗಿ ಪರಿಗಣಿಸಿ ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ (ರಿ) ನ ಆವರಣದಲ್ಲಿ ರಾಜಾರೋಷವಾಗಿ ನಡೆಯುತ್ತಿರುವ ಖಾಸಗಿ ಆಂಬುಲೆನ್ಸ್ ದರ್ಬಾರಿಗೆ ಕಡಿವಾಣ ಹಾಕಬೇಕು ಹಾಗೂ ಈ ಅವ್ಯವಹಾರದಲ್ಲಿ ಭಾಗಿಯಾಗಿರುವ ಖಾಸಗಿ ಆಂಬುಲೆನ್ಸ್ ಚಾಲಕರಾದ ಇಮ್ರಾನ್ ಹಾಗೂ ಆತನ ಸಹೋದರ ಇರ್ಫಾನ್ ಪಟಾಣ್ ಇವರ ವಿರುದ್ಧ ಸೂಕ್ತ ಕ್ರಮ ಜರುಗಿಸಬೇಕೆಂದು ಆಗ್ರಹಿಸಿದ್ದಾರೆ.

## ಕಲ್ಮಠ ವಿದ್ಯಾ ಸಂಸ್ಥೆಯಲ್ಲಿ ರಾಷ್ಟ್ರೀಯ ವಿಜ್ಞಾನ ದಿನಾಚರಣೆ



ಧೈರ್ಯದ ದಾರಿ

**ಮಾನವಿ–**ಕಲ್ಮಠ ವಿದ್ಯಾ ಸಂಸ್ಥೆಯು ವಿದ್ಯೆಯ ಜೊತೆಗೆ ಸಂಸ್ಕಾರವನ್ನು ಕಲಿಸುತ್ತದೆ––ಮಕ್ಬುಲ್ ಅಹ್ಮದ

ಮಾನವಿ ಕಲ್ಮಠ ವಿದ್ಯಾ ಸಂಸ್ಥೆಯು ಮಕ್ಕಳಿಗೆ ವಿದ್ಯೆಯ ಜೊತೆಗೆ ಸಂಸ್ಕಾರವನ್ನು ಕಲಿಸಿಕೊಡುತ್ತದೆ ಎಂದು ಕಲ್ಮಠಶಾಲೆಯ ಹಳೆಯ ವಿದ್ಯಾರ್ಥಿ ಹಾಗೂ ನಿರಮಾನವಿ ಪ್ರೌಢಶಾಲೆಯ ಪ್ರಭಾರಿ ಮುಖ್ಯ ಗುರುಗಳಾದ ಮಕ್ಬೂಲ್ ಅಹಮದ್ ಹೇಳಿದರು.ಅವರು ಗುರುವಾರ ಪಟ್ಟಣದ ಕಲ್ಮಠ ಶಾಲೆಯಲ್ಲಿ ಆಯೋಜಿಸಿದ್ದ ರಾಷ್ಟ್ರೀಯ ವಿಜ್ಞಾನ ದಿನಾಚರಣೆ ವಸ್ತು ಪ್ರದರ್ಶನ ಉದ್ಘಾಟಿಸಿ ಮಾತನಾಡಿದರು ಈ ಸಂಸ್ಥೆಯ ಇಷ್ಟೊಂದು ಹೆಮ್ಮರವಾಗಿ ಬೆಳೆಯಲು ಕಲ್ಮಠದ ಹಿರಿಯ ಶ್ರೀಗಳಾದ ಶಿವಮೂರ್ತಿ ಶಿವಾಚಾರ್ಯ ಸ್ವಾಮಿಗಳ ಶ್ರಮ ದೊಡ್ಡದಾಗಿದೆ .ಅವರ ಶ್ರಮದ ಫಲವಾಗಿ ಇಂದು ಈ ಶಾಲೆಯಲ್ಲಿ ಶಿಶುವಿಹಾರ ದಿಂದ ಪದವಿಯವರೆಗೆ ಒಂದೇ ಸೂರಿನಲ್ಲಿ ಅಭ್ಯಾಸ ಮಾಡಲು ಕಾರಣವಾಗುತ್ತದೆ ಮತ್ತು ಇಲ್ಲಿನ ಗುರುಗಳ ಪ್ರಾಮಾಣಿಕ ಪ್ರಯತ್ನದ ಫಲ ಎಂದರು.

ಇನ್ನೋರ್ವ ಅತಿಥಿಗಳಾದ ಕಲ್ಮಠ ಶಾಲೆಯ ಹಳೆಯ ವಿದ್ಯಾರ್ಥಿಗಳು ಮತ್ತು ಪ್ರೌಢಶಾಲಾ ಶಿಕ್ಷಕರ ಸಂಘದ ಅಧ್ಯಕ್ಷರಾದ ಅಶೋಕ್ ಮಳ್ಳಿ ಕಾರ್ಯಕ್ರಮ ಉದ್ಘಾಟಿಸಿ ರಾಷ್ಟ್ರೀಯ ವಿಜ್ಞಾನ ದಿನಾಚರಣೆ ಮಕ್ಕಳಲ್ಲಿ ವೈಜ್ಞಾನಿಕ ಅರಿವನ್ನು ಜನಸಾಮಾನ್ಯರಲ್ಲಿ ವಿಜ್ಞಾನದ ಬಗ್ಗೆ ಆಸಕ್ತಿ ಮೂಡಿಸುತ್ತದೆ ನಿತ್ಯ ಜೀವನದಲ್ಲಿ ವಿಜ್ಞಾನದ ಅನ್ವಯಗಳನ್ನು ತಿಳಿಸುವುದು ಇದರ ಉದ್ದೇಶವಾಗಿದೆ ಎಂದರು. ಸಿವಿ ರಾಮನ್ ರ ಜೀವನ ಕುರಿತು ಮಕ್ಕಳಿಗೆ ಹೇಳಿದರು

ವಿಜ್ಞಾನ ವಿಷಯಕ್ಕೆಸಂಬಂಧಿಸಿದ ಮಳೆ ನೀರಿನ ಕೊಯ್ಲು ,ಜ್ವಾಲಾಮುಖಿ ಸ್ಪೋಟ, ಮೊಟ್ಟೆಯ ಪ್ರಯೋಜನ, ನೀರಿನ ಸಾಂದ್ರತೆ, ಸೋಲಾರ್ ವ್ಯವಸ್ಥೆ, ಮೆಗ್ನೀಸಿಯಂ ತಂತಿಯ ಉರಿಸುವ ಪ್ರಯೋಗ ,ಮತ್ತು ಅಡುಗೆ ಸೋಡಾದಿಂದ ಚಿತ್ರ ಬರೆದು ನಂತರ ಅದನ್ನು ನೀರಿನಿಂದ ತೊಯ್ದ ಬಟ್ಟೆಯಿಂದ ಒರೆಸಿದರೆ ಚಿತ್ರ ಸ್ಪಷ್ಟವಾಗಿ ಕಾಣುವುದು ,ಹೀಗೆ ಹತ್ತು ಹಲವು ವಿಜ್ಞಾನ ಪ್ರಯೋಗಗಳನ್ನು ಮಕ್ಕಳು ಮಾಡಿ ತೋರಿಸಿದರು.

ಕಲ್ಮಠ ಪ್ರಾಥಮಿಕ ಶಾಲಾ ಶಿಕ್ಷಕಿ ಪವಿತ್ರ ಉಪನ್ಯಾಸ ನೀಡಿದರು ಕಲ್ಮಠ ಪ್ರೌಢಶಾಲೆಯ ವಿಜ್ಞಾನ ಶಿಕ್ಷಕರಾದ ನರಸಿಂಹಲು ಬಿ ಹಲವು ಪ್ರಯೋಗಗಳನ್ನು ಮಾಡಿ ತೋರಿಸಿದರು, ಮಂಜುನಾಥ್ ಕಮತರ ಪ್ರಾಸ್ತವಿಕವಾಗಿ ಮಾತನಾಡಿದರು, ಪ್ರೌಢಶಾಲೆ ಮುಖ್ಯ ಗುರುಗಳು ಪ್ರಭಯ್ಯಸ್ವಾಮಿ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಮಕ್ಕಳು ಮೂಢನಂಬಿಕೆ ಕುರಿತು ಕಿರು ನಾಟಕ ಪ್ರದರ್ಶಿಸಿದರು. ವಿದ್ಯಾರ್ಥಿಗಳು ಶಾಲಾ ಮೈದಾನದ ತುಂಬೆಲ್ಲಾ ವಿವಿಧ ವಿಜ್ಞಾನ ಚಿತ್ರಗಳ ರಂಗೋಲಿ ಬಿಡಿಸಿದ್ದರು.ವಿಜ್ಞಾನ ದಿನಾಚರಣೆಯ ಪ್ರತಿಜ್ಞಾ ವಿಧಿಯನ್ನು ರವಿಹುಲಿಯಾಪೂರ್ ಶಿಕ್ಷಕರು ಬೋಧಿಸಿದರುಕಲ್ಮಠ ಕಾಲೇಜಿನ ಪ್ರಾಚಾರ್ಯರ ಎಸ್ ಎಸ್ ಪಾಟೀಲ್, ಕಲ್ಮಠ ಪದವಿ ಕಾಲೇಜಿನ ಪ್ರಾಂಶುಪಾಲರಾದ ಸಿದ್ದನಗೌಡ ಪಾಟೀಲ್ ವೇದಿಕೆ ಮೇಲೆ ಉಪಸ್ಥಿತರಿದ್ದರು

ಎಂ ಎಂ ಹಿರೇಮಠ ನಿರೂಪಿಸಿದರು ರೂಪ ಸ್ವಾಗತಿಸಿದರು ಶಿಕ್ಷಕಿ ಜಯಶ್ರೀ ವಂದಿಸಿದರು. ಕಾರ್ಯಕ್ರಮದಲ್ಲಿ ಶಿಕ್ಷಕರಾದ ಮಹಾಂತಮ್ಮ ,ಸೌಮ್ಯ, ರಿಜ್ವಾನ ಬೇಗಂ, ಪ್ರಭಾವತಿ, ಬ್ರಮರಾಂಭ, ರಾಘವೇಂದ್ರ ಶಾಂತಯ್ಯ ಸ್ವಾಮಿ ಮತ್ತು ಪ್ರಾಥಮಿಕ ಪ್ರೌಢಶಾಲೆ ಶಾಲೆಯ ಮಕ್ಕಳು ಭಾಗವಹಿಸಿದರು

## ಡಾಕ್ಟರ್ ಸುಭಾಷ್ ಚಂದ್ರ ಪಾಟೀಲರಿಗೆ ರಾಜ್ಯಪಾಲರಿಂದ ಡಾಕ್ಟರೇಟ್ ಪ್ರಶಸ್ತಿ ಪ್ರಧಾನ




ಧೈರ್ಯದ ದಾರಿ

**ದೇವದುರ್ಗ:** ತಾಲೂಕಿನ ಜ್ಞಾನಗಂಗಾ ಸಂಸ್ಥೆಯ ಸಂಸ್ಥಾಪಕರು ಮತ್ತು ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಸಮಾಜಶಾಸ್ತ್ರದ ಪ್ರಾಧ್ಯಾಪಕರಾಗಿರುವ ಡಾಕ್ಟರ್ ಸುಭಾಷ್ ಚಂದ್ರ ಪಾಟೀಲ್ ರವರಿಗೆ ಕಲ್ಬುರ್ಗಿ ವಿಶ್ವವಿದ್ಯಾಲಯ ಗುಲ್ಬರ್ಗದಲ್ಲಿ 43ನೇ ಗಟಿಕೋತ್ಸವದಲ್ಲಿ ಡಾಕ್ಟರೇಟ್ ಪ್ರಶಸ್ತಿ ಪ್ರಧಾನವನ್ನು ಕರ್ನಾಟಕದ ಘನವೆತ್ತ ರಾಜ್ಯಪಾಲರಿಂದ ಡಾಕ್ಟರೇಟ್ ಪದವಿಯನ್ನು ಪ್ರಧಾನ ಮಾಡಲಾಯಿತು

ಡಾ. ಸುಭಾಷ್ ಚಂದ್ರ ಪಾಟೀಲ್ರವರು ಸಮಾಜಶಾಸ್ತ್ರದ ವಿಷಯದಲ್ಲಿ ಚಾಲೆಂಜರ್ಸ್ ಆಫ್ ಹೌಸ್ ಹೋಲ್ಡ್ ವುಮೆನ್ ಎನ್ನುವ ವಿಷಯದ ಮೇಲೆ ಡಾಕ್ಟರ್ ಎ ಜಿ ಖಾನ್ ಇವರ ಮಾರ್ಗದರ್ಶನದಲ್ಲಿ ಅಧ್ಯಯನ ಮಾಡಿ ಪದವಿಯನ್ನು ಪಡೆದುಕೊಂಡಿದ್ದಾರೆ ಇವರಿಗೆ ಸರ್ವ ಕುಟುಂಬದ ಸದಸ್ಯರು ಸ್ನೇಹಿತರು ಅಧ್ಯಾಪಕ ಮಿತ್ರರು ದೇವದುರ್ಗದ ತಾಲೂಕಿನ ಸಮಸ್ತ ಬಂಧುಗಳು ಶುಭ ಕೋರಿದ್ದಾರೆ

## ಕೈಯಲ್ಲಿ ಮಾರಕಾಸ್ತ್ರ ಹಿಡಿದು ನೃತ್ಯ: ಮದುಮಗ ಸೇರಿ ಮೂವರ ಬಂಧನ

**ಕಲಬುರಗಿ,ಫೆ.25–**ಮದುವೆ ಸಮಾರಂಭದಲ್ಲಿ ಕೈಯಲ್ಲಿ ಹರಿತವಾದ ಚಾಕು ಮತ್ತು ತಲವಾರ ಹಿಡಿದು ನೃತ್ಯ ಮಾಡಿದ ಪ್ರಕರಣಕ್ಕೆ ಸಂಬಂಧಿಸಿದಂತೆ ಮದುಮಗ ಸೇರಿ ಮೂವರನ್ನು ಅಶೋಕ ನಗರ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಸಂಜಯ್, ರಾಜವರ್ಧನ್ ಮತ್ತು ತುಷಾರ ಬಂಧಿತರಾದ ಆರೋಪಿಗಳು.

ಇತ್ತೀಚೆಗೆ ಅಶೋಕನಗರ ಪೊಲೀಸ್ ಠಾಣೆಯ ಶಕ್ತಿ ನಗರದ ಕಲ್ಯಾಣ ಮಂಟಪದಲ್ಲಿ ನಡೆದ ತುಷಾರ ಎಂಬ ಯುವಕನ ಮದುವೆ ಸಮಾರಂಭದಲ್ಲಿ ಸಂಜಯ್ ಹಾಗೂ ರಾಜವರ್ಧನ್ ಅವರು ಕೈಯಲ್ಲಿ ಮಾರಕಾಸ್ತ್ರ ಹಿಡಿದು ನೃತ್ಯ ಮಾಡಿದ್ದರು. ಕೈಯಲ್ಲಿ ಮಾರಕಾಸ್ತ್ರ ಹಿಡಿದು ನೃತ್ಯ ಮಾಡಿರುವ ವಿಡಿಯೋ ಸಾಮಾಜಿಕ ಜಾಲತಾಣಗಳಲ್ಲ ವೈರಲ್ ಆಗಿತ್ತು. ಈ ಸಂಬಂಧ ಆಯುಧ ಕಾಯ್ದೆ ಅಡಿಯಲ್ಲಿ ಅಶೋಕನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು.

ಈ ಹಿನ್ನೆಲೆಯಲ್ಲಿ ಮದುಮಗ ತುಷಾರ, ಸಂಜಯ್ ಹಾಗೂ ರಾಜವರ್ಧನ್ ಅವರನ್ನು ಅಶೋಕನಗರ ಪೊಲೀಸರು ಬಂಧಿಸಿದ್ದಾರೆ.

## ನೌಕರರು ಉತ್ಸಾಹದಿಂದ ಕೆಲಸ ಮಾಡಲು: ಜಿ.ಪಂ ಸಿಇಓ ಈಶ್ವರ್ ಕಾಂದೂ ಸಲಹೆ

ಧೈರ್ಯದ ದಾರಿ

**ರಾಯಚೂರು ಫೆ,26–** ಸರಕಾರಿ ನೌಕರರು ಒತ್ತಡದ ಮಧ್ಯೆಯು ಉತ್ಸಾಹದಿಂದ ಕೆಲಸ ಮಾಡುವ ಪ್ರವೃತ್ತಿಯನ್ನು ಮೈಗೊಡಿಸಿಕೊಳ್ಳಬೇಕೆಂದು ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಾದ ಈಶ್ವರ್ ಕುಮಾರ್ ಕಾಂದೂ ಅವರು ಹೇಳಿದರು.

ನಗರದ ಕೃಷಿ ವಿವಿಯ ಆವರಣದಲ್ಲಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಜಿಲ್ಲಾ ಪಂಚಾಯತ್ ವತಿಯಿಂದ ಆಯೋಜಿಸಿದ 2025–26ನೇ ಸಾಲಿನ ನೌಕರರ ವಾರ್ಷಿಕ ಕ್ರೀಡಾಕೂಟದಲ್ಲಿ ವಿಜೇತರಿಗೆ ಬಹುಮಾನ ವಿತರಿಸಿ ಮಾತನಾಡಿದರು.

ಕ್ರೀಡೆಯಲ್ಲಿರುವ ನಿಮ್ಮ ಉತ್ಸಾಹ ಕೆಲಸದಲ್ಲಿಯು ತೊಡಗಿಸಿಕೊಳ್ಳಬೇಕು. ಅಧಿಕಾರಿಗಳು ಮತ್ತು ಸಿಬ್ಬಂದಿ ವರ್ಗದವರು ಪ್ರತಿ ನಿತ್ಯ ಕ್ರೀಡಾ ಚಟುವಟಿಕೆಯಲ್ಲಿ ನಿಮ್ಮನ್ನು ನೀವು ಸಕ್ರಿಯವಾಗಿ ತೊಡಗಿಸಿಕೊಳ್ಳುವ ಮೂಲಕ ದೈಹಿಕ, ಮಾನಸಿಕವಾಗಿ ಆರೋಗ್ಯವನ್ನು ಸದೃಢರನ್ನಾಗಿಸಿಕೊಳ್ಳಲು ಸಾಧ್ಯವಾಗುತ್ತದೆಂದು ತಿಳಿಸಿದರು.

ಕಳೆದ ಎರಡು ದಿನಗಳ ಕಾಲ ವಿವಿಧ ಸ್ಪರ್ಧೆಗಳಲ್ಲಿ ಭಾಗವಹಿಸಿ ನಿಮ್ಮಲ್ಲಿರುವ ಪ್ರತಿಭೆಯನ್ನು ಪ್ರದರ್ಶಿಸಲು ಸಹಕಾರಿಯಾಗಿದೆ ಎಂದರು. ಕ್ರೀಡಾಕೂಟವನ್ನು ವ್ಯವಸ್ಥಿತವಾಗಿ ಆಯೋಜಿಸಿ ಯಶಸ್ವಿಗೆ ಶ್ರಮಿಸಿದ ಜಿ.ಪಂ ಅಧಿಕಾರಿಗಳಿಗೆ ಹಾಗೂ ವಿವಿಧ ತಾಲೂಕ ಕಾರ್ಯನಿರ್ವಾಹಕ ಅಧಿಕಾರಿಗಳು, ಸಹಾಯಕ ನಿರ್ದೇಶಕರಿಗೆ ಅಭಿನಂದನೆ ಸಲ್ಲಿಸಿದರು.

ಕೃಷಿ ವಿವಿಯ ಜಗಜ್ಯೋತಿ ಶ್ರೀ ಬಸವೇಶ್ವರ ಸಭಾಂಗಣದಲ್ಲಿ ನಡೆದ ಸಾಂಸ್ಕೃತಿಕ ಕಾರ್ಯಕ್ರಮಗಳು ನೋಡುಗರ ಮನ ರಂಜಿಸಿದ್ದವು.ಜಿ.ಪಂ ತಂಡದ ವಿಜೇತರ ಪಟ್ಟಿ: 200 ಹಾಗೂ 400 ಮೀ ಓಟದಲ್ಲಿ ಕು.ಅಕ್ಷಿತಾ ಇವರು ದ್ವಿತೀಯ ಸ್ಥಾನ, ಮಹಿಳೆಯರ ವಿಭಾಗ ಶಟಲ್ ಬ್ಯಾಡ್ಮಿಂಟನ್ ಹಾಗೂ ಟೇಬಲ್ ಟೆನಿಸ್ ಅಲ್ಲಿ ಮಾನಸಾ, ರಂಜಿತಾ, ಕು.ಕಲ್ಪನಾ ಇವರು ಪ್ರಥಮ ಪಡೆದರು.

ಪುರುಷರು ವಿಭಾಗ ಶಟಲ್ ಬ್ಯಾಡ್ಮಿಂಟನ್ ನಲ್ಲಿ ಸತೀಶ್, ರಾಘವೇಂದ್ರ ಕುಲಕರ್ಣಿ, ವೇಣುಗೋಪಾಲ್ ವರಪ್, ಬಸವೇಶ್ವರ, ಸಲಿಮಾಲೀಕ್ ಇವರು ಪ್ರಥಮ ಸ್ಥಾನ ಪಡೆದರು.ನರಸರೆಡ್ಡಿ ಇವರು ಪುರುಷರು 200 ಮೀ ಓಟ, ಶಾಟ್ ಪುಟ್, ಉದ್ದ ಜಿಗಿತದಲ್ಲಿ ಪ್ರಥಮ ಪಡೆದರು. ನಿಂಗಪ್ಪ ಇವರು ಬರ್ಚಿ ಎಸೆತದಲ್ಲಿ ಪ್ರಥಮ ಹಾಗೂ 100 ಮೀ ಓಟದಲ್ಲಿ ದ್ವಿತೀಯ ಸ್ಥಾನ ಪಡೆದರು. ಮಹಿಳೆಯರ ಚೆಸ್ ಅಲ್ಲಿ ಉರುಕುಂದಮ್ಮ ದ್ವಿತೀಯ ಸ್ಥಾನ ಹಾಗೂ ಪುರುಷರು ಚೆಸ್ ಅಲ್ಲಿ ಬಸವೇಶ್ವರ ಪ್ರಥಮ ಸ್ಥಾನ ಪಡೆದರು.

ಗುಂಪು ಕ್ರೀಡೆಗಳಾದ ಮಹಿಳೆಯರ ಥ್ರೋಬಾಲ್ ನಲ್ಲಿ ಮಾನಸಾ ಹಾಗೂ ತಂಡ ದ್ವಿತೀಯ ಸ್ಥಾನ, ಮಹಿಳೆಯರ ಹಗ್ಗಜಗ್ಗಾಟ ಕ್ರೀಡೆಯಲ್ಲಿ ಕು.ಪೂಜಾ ಹಾಗೂ ತಂಡ ಪ್ರಥಮ ಸ್ಥಾನ ಪಡೆದರು.ಮಾನ್ವಿ ಮತ್ತು ರಾಯಚೂರು ಜಿಲ್ಲಾ ಪಂಚಾಯತ ತಂಡಗಳ ನಡುವೆ ನಡೆದ ಕ್ರಿಕೆಟ್ ಫೈನಲ್ ಪಂದ್ಯಾವಳಿಯಲ್ಲಿ ಮಾನ್ವಿ ತಂಡ ಗೆದ್ದು ಜಿಲ್ಲಾ ಪಂಚಾಯತ್ ರನ್ನರ್ ಆಪ್ ಪ್ರಶಸ್ತಿ ಪಡೆದುಕೊಂಡಿತು.







ಇದೇ ಸಂದರ್ಭದಲ್ಲಿ ಜಿಲ್ಲಾ ಪಂಚಾಯತ್ ಉಪ ಕಾರ್ಯದರ್ಶಿ ಹಾಲಸಿದ್ದಪ್ಪ ಪೂಜೇರಿ, ಯೋಜನಾ ನಿರ್ದೇಶಕರು ಶರಣಬಸವರಾಜ ಕೆ, ಮುಖ್ಯ ಯೋಜನಾಧಿಕಾರಿ ಡಾ.ಟಿ.ರೋಣಿ, ಮುಖ್ಯ ಲೆಕ್ಕಾಧಿಕಾರಿ ವಿಜಯಶಂಕರ ಸೇರಿದಂತೆ ಜಿಲ್ಲೆಯ ವಿವಿಧ ತಾಲೂಕ ಕಾರ್ಯನಿರ್ವಾಹಕ ಅಧಿಕಾರಿಗಳು, ಸಹಾಯಕ ನಿರ್ದೇಶಕರು, ಅಧಿಕಾರಿಗಳು, ಸಿಬ್ಬಂದಿ ವರ್ಗದವರು ಇದ್ದರು.

# ಪರವಾನಿಗಿ ಭೂಮಾಪಕರ ಸಂಘ ದಿಂದ ಮನವಿ



ಧೈರ್ಯದ ದಾರಿ

**ಮಾನ್ವಿ:** ಪಟ್ಟಣದ ಭೂದಾಖಲೆಗಳ ಸಹಾಯಕ ನಿರ್ದೇಶಕರ ಕಚೇರಿಯಲ್ಲಿ ಅಖಿಲ ಕರ್ನಾಟಕ ಸರ್ಕಾರಿ ಪರವಾನಿಗಿ ಭೂಮಾಪಕರ ಸಂಘ ಮಾನ್ವಿ ಮತ್ತು ಸಿರವಾರ ವತಿಯಿಂದ ಭೂದಾಖಲೆಗಳ ಸಹಾಯಕ ನಿರ್ದೇಶಕ ಮೊಹಮ್ಮದ್ ನೂರುದ್ದೀನ್ ರವರಿಗೆ ಮನವಿ ಸಲ್ಲಿಸಿ ಮಾನ್ವಿ ತಾ.ಅಧ್ಯಕ್ಷರಾದ ಡಿ.ಎಚ್ ಪರಶುರಾಮಪ್ಪ ಮಾತನಾಡಿ ರಾಜ್ಯ ಸರ್ಕಾರವು 1999-20 ನೇ ಸಾಲಿನಲ್ಲಿ ಪರವಾನಿಗೆ ಭೂಮಾಪಕರುಗಳನ್ನಾಗಿ ನಮ್ಮನ್ನು ನೇಮಕ ಮಾಡಿ ಹುದ್ದೆ ಸೃಜಿಸಿದರು ಕೂಡ ಪರವಾನಿಗೆ ಭೂಮಾಪಕರುಗಳನ್ನು 11 ಇ.ಹಾಗೂ ತತ್ಕಾಲ್ ಪೋಡಿಗೆ ಮಾತ್ರ ಸೀಮಿತ ಗೊಳಿಸಿ ಪ್ರತಿ ಕಡತಕ್ಕೆ ಕೇವಲ 4ನೂರು ರುಗಳನ್ನು ನಿಗದಿಗೊಳಿಸಿ ರೈತರ ಅರ್ಜಿಗಳಿಗೆ ನಮಗೆ ಕೇವಲ 3 ನೂರು ಮಾತ್ರ ಸಂಭವನೆ ದೊರೆಯುತ್ತಿದೆ ಕಾಲಕೆ ತಕ್ಕಂತೆ ಕಾನೂನುಗಳನ್ನು ತಿದ್ದುಪಡಿ ಮಾಡಿ ಸರ್ಕಾರಿ ಭೂಮಾಪಕರು ನಿರ್ವಹಿಸಬೇಕಾದ ಹದ್ದುಬಸ್ತು, ಪೋಡಿಮುಕ್ತ ಅಭಿಯಾನ, ಸ್ವಾಮಿತ್ವ, ಆಕಾರ ಬಂದ್ ,ಗಣಕೀಕರಣ,ದೇವಸ್ಥಾನ ,ಕೆರೆಗಳು,ಸರ್ಕಾರಿ ಶಾಲೆಗಳು.ಕೆ.ಪಿ. ಟಿ.ಸಿ.ಎಲ್. ದರಖಾಸ್ತು,ರೈಲ್ವೆ ಆಳತೆ, ರಸ್ತೆ ಆಳತೆ,ಕೋರ್ಟ್ ಪ್ರಕರಣಗಳು,ತಕರಾರು,ಪ್ರಕರಣಗಳನ್ನು ಕೂಡ ನಿರ್ವಹಿಸಬೇಕಾಗಿದೆ ಅದ್ದರೆ ವೇತನ ಮಾತ್ರ ಸಮಾನವಾಗಿ ನೀಡುತ್ತಿಲ್ಲ ಅದ್ದರಿಂದ ಪರವಾನಿಗಿ ಭೂಮಾಪಕರಿಗೂ ಕೂಡ ಸಮಾನ ಕೇಲಸಕ್ಕೆ ಸಮಾನ ವೇತನವನ್ನು ನೀಡಬೇಕು ಹಾಗೂ ಪರವಾನಿಗಿ ಭೂಮಾಪಕರನ್ನು ಸರ್ಕಾರಿ ಭೂಮಾಪಕರನ್ನಾಗಿ ಮೇಮಕ ಮಾಡಿಕೊಳ್ಳುವವರೆಗೂ ಮಾನ್ವಿ ಮತ್ತು ಸಿರವಾರ ತಾಲೂಕುಗಳ ಪರವಾನಿಗಿ ಭೂಮಾಪಕರುಗಳು ಕೇಲಸವನ್ನು ಸ್ಥಗೀತಗೊಳ್ಳಿಸಿ ಪ್ರತಿಭಟನೆಯನ್ನು ಹಮ್ಮಿಕೊಳ್ಳಲಾಗಿರುವುದರಿಂದ ಮಾನ್ವಿ ಮತ್ತು ಸಿರವಾರ ತಾಲೂಕುಗಳಲ್ಲಿ ರೈತರು ನೀಡಿದ ಕಡತಗಳನ್ನು ಹಿಂಪಡೆಯುವಂತೆ ಒತ್ತಾಯಿಸಿದರು.

ಸಿರವಾರ ತಾ.ಅಧ್ಯಕ್ಷರಾದ ಕೃಷ್ಣ, ತಪಾಸಕರಾದ ಮೈನುದ್ದೀನ್ , ಗಾಯತ್ರಿ ಪರವಾನಿಗೆ ಭೂಮಾಪಕರಾದ ಓಂಕಾರ ಮೂರ್ತಿ, ಉದಯಕು ಮಾರ್,ಮೊಹಿನುದ್ದೀನ್,ಸಿದ್ದರಾಜಯ್ಯ, ವೀರನಗೌಡ , ವಿಶ್ವನಾಥ,ಪರಮೇಶ,ರಾಜ ಮಹ್ಮದ್, ಮಹಮ್ಮ ದ್‌ಜಾಫರ್,ಮಹೇಶ್ ಪಾಟೀಲ್ ,ಸಂತೋಷ,ಮಹಿಬೂಬ್,ರ'ಮೇಶ ಚೌಹಣ್, ಹೆಚ್. ಸುರೇಶ್, ಟಿ.ಎಮ್.ಇರ್ಫಾನ್, ಜಯ ಣ್ಣ, ಮಹಾಂತೇಶ್ ವಿಶಾಲಾಕ್ಷಿ,ಮಲ್ಲಿಕಾರ್ಜುನ್, ಯಶವಂತ್ ರಾವ್,ಚಂದ್ರಪ್ಪಬಂಡೆಬಾವಿ,ವಿರೇಂದ್ರ, ನರಸಿಂಹಲು, ಜಗನಾಥ,ಶಿವಕುಮಾರ,ಶರಣ ಬಸವ, ಸಂಜು, ಶಿವಶಂಕರ್, ರಾಮಲಿಂಗಪ್ಪ, ವೆಂಕಟೇಶ್ ಸೇರಿದಂತೆ ಮಾನ್ವಿ ಮತ್ತು ಸಿರವಾರ ತಾಲೂಕುಗಳ ಪರವಾನಿಗೆ ಹೊಂದಿದ ಭೂಮಾಪಕರು ಇದ್ದರು.

# ಎನ್‌ಸಿಇಆರ್‌ಟಿ ಪುಸ್ತಕ ನಿಷೇಧ



**ನವದೆಹಲಿ,ಫೆ.26-** ನ್ಯಾಯಾಂಗ ಭ್ರಷ್ಟಾಚಾರ ಕುರಿತ ಪಠ್ಯ ಸೇರಿಸಲಾಗಿದ್ದ 8ನೇ ತರಗತಿಯ ಎನ್‌ಸಿಇಆರ್‌ಟಿ ಪುಸ್ತಕವನ್ನು ಸುಪ್ರೀಂಕೋರ್ಟ್ ನಿಷೇಧಿಸಿದೆ. ಎಲ್ಲಾ ಪುಸ್ತಕಗಳ ಡಿಜಟಲ್ ಕಾಪಿಗಳನ್ನು ತೆಗೆದುಹಾಕುವಂತೆ ಆದೇಶಿಸಿ, ಪುಸ್ತಕಗಳ ಜಪ್ತಿಗೂ ಸೂಚನೆ ನೀಡಿದೆ.

ನ್ಯಾಯಾಂಗ ವ್ಯವಸ್ಥೆಯನ್ನು ದುರ್ಬಲಗೊಳಿಸಲು ಮತ್ತು ನ್ಯಾಯಾಂಗದ ಘನತೆಯನ್ನು ಕುಗ್ಗಿಸಲು ಉದ್ದೇಶಪೂರಕವಾಗಿ ನಡೆಸಲಾದ ಕ್ರಮ ಇದಾಗಿದೆ ಎಂದು ಮುಖ್ಯ ನ್ಯಾಯಮೂರ್ತಿ ಸೂರ್ಯಕಾಂತ್ ನೇತೃತ್ವದ ನ್ಯಾಯಪೀಠ ಹೇಳಿ ಈ ಕುರಿತ ಕೂಲಂಕುಷ ತನಿಖೆ ನಡೆಸಲು ಬಯಸುತ್ತೇವೆ ಎಂದು ಪೀಠ ಹೇಳಿದೆ.

ಇದಕ್ಕೆ ಯಾರು ಹೊಣೆಗಾರರು ಎಂಬುದನ್ನು ಕಂಡು ಹಿಡಿಯುವುದು ನ್ಯಾಯಾಂಗದ ಮುಖ್ಯಸ್ಥರಾಗಿ ನನ್ನ ಕರ್ತವ್ಯ ಈ ಸಂಬಂಧ ತಲೆದಂಡ ಆಗಬೇಕಿದೆ ಎಂದು ಮುಖ್ಯ ನ್ಯಾಯಮೂರ್ತಿ ಸೂರ್ಯಕಾಂತ್ ಗರಂ ಆಗಿ ಹೇಳಿದರು.

ಈ ಸಂಬಂಧ ಎನ್‌ಸಿಇಆರ್‌ಟಿ ನಿರ್ದೇಶಕರು ಶಾಲಾ ಶಿಕ್ಷಣ ಕಾರ್ಯದರ್ಶಿಗೆ ಶೋಕಾಸ್ ನೋಟಿಸ್ ನೀಡಿರುವ ನ್ಯಾಯಾಲಯ ನಿಮ್ಮ ವಿರುದ್ಧ ಏಕೆ ಕ್ರಮ ಕೈಗೊಳ್ಳಬಾರದು ಎಂದು ಪ್ರಶ್ನಿಸಿದೆ. ಅಲ್ಲದೆ ಕೇಂದ್ರ ಮತ್ತು ರಾಜ್ಯ ಸರ್ಕಾರದ ಅಧಿಕಾರಿಗಳು ಕೂಡಲೇ ತನ್ನ ನಿರ್ದೇಶನವನ್ನು ಪಾಲಿಸುವಂತೆ ಆದೇಶಿಸಿದೆ. ಯಾವುದೇ ವಿಧದಲ್ಲಿ ನಿರ್ದೇಶನಗಳನ್ನು ಉಲ್ಲಂಘಿಸಿದರೆ ಗಂಭೀರ ಕ್ರಮ ಕೈಗೊಳ್ಳುವುದಾಗಿ ನ್ಯಾಯಾಲಯ ಎಚ್ಚರಿಸಿದೆ.

ಇಂತಹ ಪಠ್ಯಗಳನ್ನು ನಿಯಂತ್ರಸದಿದ್ದರೆ ನ್ಯಾಯಾಂಗದ ಮೇಲಿನ ಜನರ ನಂಬಿಕೆಯನ್ನು ಇದು ಹಾಳುಮಾಡುತ್ತಿದೆ. ಈ ಸಂಬಂಧಿತ ಯಾರನ್ನು ಶಿಕ್ಷೆ ವಿಧಿಸದೆ ಬಿಡಲಾಗುವುದಿಲ್ಲ ಎಂದು ಮುಖ್ಯ ನ್ಯಾಯ ಮೂರ್ತಿ ನೇತೃತ್ವದ ನ್ಯಾಯಪೀಠ ಹೇಳಿದೆ.

ನಿನ್ನೆಯ ವಿಚಾರಣೆ ಸಂದರ್ಭದಲ್ಲಿ ಎನ್‌ಸಿಇಆರ್ ಟಿ ವಿವರಣೆಯನ್ನು ಮುಖ್ಯ ನ್ಯಾಯಾಧೀಶರಾದ ಸೂರ್ಯಕಾಂತ್ ಪ್ರಸ್ತಾಪಿಸಿ, ಅದರಲ್ಲಿ ಕ್ಷಮೆ ಕೇಳುವ ಬಗ್ಗೆ ಒಂದು ಪದವನ್ನು ಉಲ್ಲೇಖಿಸಿಲ್ಲ. ಬದಲಿಗೆ ಪಠ್ಯವನ್ನು ಸಮರ್ಥಿಸಿಕೊಳ್ಳುವ ಯತ್ನ ನಡೆದಿದೆ ಎಂದು ಕಿಡಿಕಾರಿ ವಿಚಾರಣೆಯನ್ನು ಮಾರ್ಚ್ 11ಕ್ಕೆ ಮುಂದೂಡಿದರು.

ನ್ಯಾಯಾಂಗ ಇಲಾಖೆಯ ಭ್ರಷ್ಟಾಚಾರದ ಬಗ್ಗೆ ಉಲ್ಲೇಖ ಮಾಡಿದ ಕ್ರಮಕ್ಕೆ ತೀವ್ರ ಆಕ್ಷೇಪ ವ್ಯಕ್ತಪಡಿಸಿ ಸ್ವಯಂ ಪ್ರೇರಿತ ಪ್ರಕರಣ ದಾಖಲಿಸಿಕೊಂಡಿದ್ದ ಸುಪ್ರೀಂಕೋರ್ಟ್, ಪ್ರೌಢಶಾಲಾ 8 ನೇ ತರಗತಿಯ ಎನ್‌ಸಿಇಆರ್‌ಟಿ ಪಠ್ಯಪುಸ್ತಕದಲ್ಲಿ ನ್ಯಾಯಾಂಗ ಭ್ರಷ್ಟಾಚಾರ'ದ ಅಧ್ಯಾಯ ಹೊಂದಿರುವ ಎನ್ ಸಿಇ ಆರ್ ಟಿಯ ಸಮಾಜ ವಿಜ್ಞಾನ ಪುಸ್ತಕವನ್ನು ನಿಷೇದಿಸಿದೆ

'ನ್ಯಾಯಾಂಗ ಭ್ರಷ್ಟಾಚಾರ'ದ ಕುರಿತು ಅಧ್ಯಾಯಗಳನ್ನು ರಚಿಸುವಲ್ಲಿ ತೊಡಗಿರುವ ಯುಜಿಸಿ ಅಥವಾ ಯಾವುದೇ ಸಚಿವಾಲಯದೊಂದಿಗೆ ಇನ್ನು ಮುಂದೆ ಕೆಲಸ ಮಾಡುವುದಿಲ್ಲ ಎಂದು ಕೇಂದ್ರ ಸರ್ಕಾರ ಸುಪ್ರೀಂ ಕೋರ್ಟ್‌ಗೆ ತಿಳಿಸಿದೆ.

ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ "ಸ್ವಯಂ ಪ್ರೇರಿತ" ಪ್ರಕರಣದಲ್ಲಿ, ನ್ಯಾಯಾಲಯದ ಬೇಷರತ್ತಾದ ಕ್ಷಮೆಯಾಚಿಸುತ್ತೇವೆ ಎಂದು ಹೇಳಿದೆ.

ಭಾರತೀಯ ನ್ಯಾಯಾಂಗ ಭ್ರಷ್ಟವಾಗಿದೆ ಮತ್ತು ಪ್ರಕರಣಗಳು ಬಾಕಿ ಇವೆ ಎಂದು ಇಡೀ ಬೋಧನಾ ಸಮುದಾಯಕ್ಕೆ ಹೇಳಲಾಗುತ್ತದೆ ನಂತರ ವಿದ್ಯಾರ್ಥಿಗಳು, ಮತ್ತು ನಂತರ ಪೋಷಕರು. ಆಳವಾದ ಪಿತೂರಿ" ಎಂದು ಹೇಳಿದ್ದಾರೆ.

32 ಪುಸ್ತಕಗಳು ಮಾರಾಟವಾಗಿವೆ ಆದರೆ ಈಗ ಅವುಗಳನ್ನು ಹಿಂಪಡೆಯಲಾಗಿದೆ ಎಂದು ಎಸ್.ಜಿ. ಮೆಹ್ತಾ ಹೇಳಿದರು.

ಪಠ್ಯದಲ್ಲೇನಿದೆ

ಈ ಪಠ್ಯದಲ್ಲಿ ನ್ಯಾಯಾಂಗದಲ್ಲಿ ಭ್ರಷ್ಟಾಚಾರ, ಹಲವು ಪ್ರಕರಣಗಳು ಬಾಕಿ ಉಳಿದುಕೊಂಡಿವೆ. ದೇಶದಲ್ಲಿ ಸಾಕಾಗುವಷ್ಟು ನ್ಯಾಯಾಧೀಶರು ಇಲ್ಲ ಎಂಬ ಅಂಶವನ್ನು ಪ್ರಸ್ತಾಪಿಸಿದೆ.

ಸುಪ್ರೀಂಕೋರ್ಟ್‌ನಲ್ಲಿ 81 ಸಾವಿರ ಪ್ರಕರಣಗಳು, ವಿವಿಧ ಹೈಕೋರ್ಟ್‌ಗಳಲ್ಲಿ 62.4 ಲಕ್ಷ ಪ್ರಕರಣಗಳು ಇನ್ನೂ ಇತ್ಯರ್ಥ್ಯವಾಗಿಲ್ಲ. ಇತರೆ ನ್ಯಾಯಾಲಯಗಳಲ್ಲಿ 4.7 ಕೋಟಿ ಪ್ರಕರಣಗಳು ಬಾಕಿ ಇವೆ ಎಂಬ ವಿಷಯವನ್ನು ಪ್ರಸ್ತಾಪಿಸಲಾಗಿತ್ತು.

# ಪ್ರೇಕ್ಷಕರ ವಿಕ್ಷಣೆ-ಕಲಾವಿದರ ಸಾಧನೆಯಿಂದ ಚಲನಚಿತ್ರ ಯಶಸ್ಸು ಕಂಡಿದೆ: ವಿಷ್ಣುಕಾಂತ



**ಬೀದರ್:ಫೆ.26:** ಪ್ರೇಕ್ಷಕರು 50 ದಿನ ನಿರಂತರವಾಗಿ ಚಲನಚಿತ್ರ ವಿಕ್ಷಿಸಿ ದಾಖಲೆ ಬರೆದರೆ ಈ ಚಿತ್ರದಲ್ಲಿ ಒಂದು ಗಡಿ ಜಿಲ್ಲೆಯ ಕಲಾವಿದರು ಅಭಿನಯಿಸಿ ಜನಪ್ರಿಯತೆ ಮೆರೆದ ಕಾರಣದಿಂದ ಅಕ್ಕಮಹಾದೇವಿ ಚಲನಚಿತ್ರ ಬರೀ ಬೀದರ್ ಅಷ್ಟೆ ಅಲ್ಲ, ಭಾಲ್ಕಿ, ನೆರೆಯ ಮಹಾರಾಷ್ಟ್ರದ ಉದಗಿರ ಸೇರಿದಂತೆ ಇನ್ನಿತರ ಜಿಲ್ಲೆಗಳಲ್ಲೂ 50 ದಿನ ಈ ಚಿತ್ರ ನಡೆದು ದಾಖಲೆ ಕಂಡಿದೆ. ಅದರಲ್ಲೂ ವಿಶೇಷವಾಗಿ ರಾಜ್ಯ ರಾಜ್ಯಧಾನಿ ಬೆಂಗಳೂರಿನ ಹೃದಯಭಾಗ ಗಾಂಧಿನಗರದಲ್ಲಿಯೂ ಸಹ ಈ ಚಿತ್ರ 50 ದಿನ ಯಶಸ್ವಿಯಾಗಿ ಓಡಿದೆ ಎಂದರೆ ಇದಕ್ಕೆಲ್ಲ ಅಭಿಮಾನಿಗಳ ಪ್ರೋತ್ಸಾಹ ಕಾರಣವಾಗಿದೆ ಎಂದು ಅಕ್ಕಮಹಾದೇವಿ ಚಲನಚಿತ್ರದ ನಟ, ನಿರ್ದೇಶಕರು ಹಾಗೂ ನಿರ್ಮಾಪಕರಾದ ವಿಷ್ಣುಕಾಂತ.ಬಿ.ಜೆ ಅಭಿಪ್ರಾಯ ಪಟ್ಟರು.

ಇತ್ತಿಚೀಗೆ ನಗರದ ಗುಂಪಾ ರಸ್ತೆಯಲ್ಲಿರುವ ಸಪ್ನಾ ಮಲ್ಟಿಪ್ಲೆಕ್ಸ ಚಿತ್ರಮಂದಿರದ ಮುಂಭಾಗದಲ್ಲಿ ಆಯೋಜಿಸಿದ 50 ದಿನಗಳ ಯಶಸ್ವಿ ಸಂಭ್ರಮೋತ್ಸವ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಅಕ್ಕಮಹಾದೇವಿ ಒಂದು ಧಾರ್ಮಿಕ ಹಾಗೂ ಅಧ್ಯಾತ್ಮಿಕ ಚಲನಚಿತ್ರ. ಇದು ಪ್ರಾರಂಭದಿಂದಲೂ ಇಲ್ಲಿಯ ವರೆಗೆ ವಚನ ಸಮೂಹ ಸಂಸ್ಥೆ, ಬಸವಪರ ಸಂಘಟನೆಗಳು, ಕನ್ನಡಪರ ಸಂಘಟನೆಗಳು, ದಲಿತಪರ ಸಂಘಟನೆಗಳು ಸೇರಿದಂತೆ ವಿವಿಧ ಸಂಘ, ಸಂಸ್ಥೆಗಳ ಪ್ರತಿನಿಧಿಗಳು, ಮಠಾಧೀಶರು, ರಾಜಕೀಯ ಧುರೀಣರು, ಜನಪ್ರತಿನಿಧಿಗಳು, ಸಾಹಿತ್ಯಾಸಕ್ತರು, ಸಾಂಸ್ಕೃತಿಕ ಚಿಂತನೆಯುಳ್ಳವರು, ಬಿ.ವಿ.ಭೂಮರಡ್ಡಿ ಕಾಲೇಜು, ಕರ್ನಾಟಕ ಕಾಲೇಜು, ಸ್ವಾಮಿ ನರೇಂದ್ರ ಪದವಿ ಪೂರ್ವ ಕಾಲೇಜು, ದಿ.ಮಿಲಿನಿಯಮ್ ಪಬ್ಲಿಕ್ ಸ್ಕೂಲ್, ಫ್ಯುಚರ್ ಕೀಡ್ಸ್ ಸ್ಕೂಲ್, ಆಕ್ಸಪರ್ಡ್ ಶಾಲೆ ಸೇರಿದಂತೆ ಇತರೆ ಶಾಲಾ-ಕಾಲೇಜುಗಳ ಶಿಕ್ಷಕರು-ವಿದ್ಯಾರ್ಥಿಗಳು ಚಲನಚಿತ್ರ ವಿಕ್ಷಣೆ ಮಾಡಿ ನಮ್ಮೆಲ್ಲ ಕಲಾವಿದರನ್ನು ಪ್ರೋತ್ಸಾಹಿಸಿದಕ್ಕೆ ಕೃತಜ್ಞತೆ ಸಲ್ಲಿಸುವುದಾಗಿ ವಿಷ್ಣುಕಾಂತ ಹೇಳಿದರು.

ಚಲನಚಿತ್ರಕ್ಕೆ ಸಹಕಾರ ನೀಡಿದ ವಚನ ಸಮೂಹ ಸಂಸ್ಥೆಯ ಮುಖ್ಯಸ್ಥ ಅಲ್ಲಮಪ್ರಭು ನಾವದಗೇರಿ ಈ ಸಂದರ್ಭದಲ್ಲಿ ಮಾತನಾಡಿ, ಈ ನಾಡಿನಲ್ಲಿ 4 ಕೋಟಿ ಲಿಂಗಾಯತರಿದ್ದೇವೆ. ಈ ಚಲನಚಿತ್ರವು ಶರಣ ಪರೆಂಪರೆಯ ತಳಹದಿಯಲ್ಲಿದ್ದು, ನಾವೆಲ್ಲ ಮುಂದೆ ಬಂದು ನಮ್ಮ ಸಮೂದಾಯದ ಪ್ರತೀಕವಾದ ಇದನ್ನು ವಿಕ್ಷಿಸಿ ಪ್ರೋತ್ಸಾಹಿಸಿದರೆ ಈ ಚಿತ್ರವು 200 ದಿನಕ್ಕಿಂತಲೂ ಹೆಚ್ಚು ದಿನ ಓಡಲಿದೆ. ಇದರಿಂದ ಇದರಲ್ಲಿ ಅಭಿನಯಿಸಿದ ಎಲ್ಲ ಕಲಾವಿದರಿಗೆ ಪ್ರೋತ್ಸಾಹಿಸಿದಂತಾಗುತ್ತದೆ. ಅಲ್ಲದೆ ಚಲನಚಿತ್ರ ನಿರ್ಮಾಪಕರಿಗೂ ಆರ್ಥಿಕ ಹೊರೆ ಕಡಿಮೆಯಾಗಲಿದೆ ಎಂದರು.

ಕಸಾಪ ಜಿಲ್ಲಾ ಗೌರವ ಕಾರ್ಯದರ್ಶಿ ಡಾ.ಶಿವಶಂಕರ ಟೋಕರೆ ಮಾತನಾಡಿ, ಕಾಂಕ್ರಿಟ್ ಜಗತ್ತಿನಿಂದ ಸಾಂಸ್ಕೃತಿಕ ಜಗತ್ತಿಗೆ ಕಾಲಿರಿಸಿರುವ ಚಲನಚಿತ್ರದ ನಟ, ನಿರ್ಮಾಪಕ ಹಾಗೂ ನಿರ್ದೇಶಕರಾದ ವಿಷ್ಣುಕಾಂತ ಅವರು ಇಲ್ಲಿಯ ಕಲಾವಿದರನ್ನು ಬೆಳೆಸುವ ದೃಷ್ಟಿಯಿಂದ ಸ್ಥಳಿಯ ಕಲಾಕಾರರನ್ನೆ ಚಿತ್ರಕ್ಕೆ ತೆಗೆದುಕೊಂಡು ಜಿಲ್ಲೆಯ ಕೀರ್ತಿ ಹೆಚ್ಚಿಸಲು ಮುಂದಾಗಿರುವುದು ಬಹಳ ಸಂತೋಷ. ಎಂದರು.

ಪ್ರಾಧ್ಯಾಪಕ ಶಿವಕುಮಾರ ಸಾಲಿ, ದತ್ತಗಿರಿ ಶಾಲೆಯ ಪ್ರಾಚಾರ್ಯೆ ಜಯದೇವಿ ಯದಲಾಪುರೆ ಹಾಗೂ ಕಲಾವಿದರಾದ ನಾಗರಾಜ ಜೋಗಿ ಮಾತನಾಡಿದರು. ಕಲಾವಿದರಾದ ವೈಜಿನಾಥ ಬಿರಾದಾರ, ಜೈ ಸ್ವಾಮಿ, ಶ್ರೀ ಗೌರಿ, ಲಿಂಗಾರ್ತಿ ನಾವದಗೆರೆ, ಶಿವಶರಣ ವಲ್ಲೆಪುರೆ, ಧನರಾಜ ಅಣಕಲೆ ಸೇರಿದಂತೆ ಅಕ್ಕಮಹಾದೇವಿ ಚಲನಚಿತ್ರದಲ್ಲಿ ಅಭಿನಯಿಸಿದ ಹಲವಾರು ಕಲಾವಿದರು, ಸಾಹಿತ್ಯಾಸಕ್ತರು, ಅಭಿಮಾನಿಗಳು ಈ ಸಂದರ್ಭದಲ್ಲಿದ್ದರು.

ಕಾರ್ಯಕ್ರಮದ ನಿಮಿತ್ಯ ಬೃಹತ್ತಾದ ಬ್ಯಾನರ್‌ಗೆ ಹೂಮಾಲೆ ಹಾಕುವ ಮೂಲಕ ಸಂಭ್ರಮಾಚರಣೆ ಮಾಡಿದರು.

# ಭೀಮಾ ನದಿಯಲ್ಲಿ 7 ವರ್ಷದ ಬಾಲಕಿ ಮುಳುಗಿ ಸಾವು



**ಯಾದಗಿರಿ:ಫೆ.26:** ಧಾರ್ಮಿಕ ಉತ್ಸವದ ಉಲ್ಲಾಸ ಕ್ಷಣಾರ್ಧದಲ್ಲಿ ದಾರುಣ ದುರಂತಕ್ಕೆ ತಿರುಗಿದ ಘಟನೆ ಯಾದಗಿರಿ ಜಿಲ್ಲೆಯ ವಡಗೇರಾ ತಾಲೂಕಿನ ಬೆನಕನಹಳ್ಳಿ ಗ್ರಾಮದಲ್ಲಿ ಮಂಗಳವಾರ ಸಂಭವಿಸಿದೆ. ಭೀಮಾ ನದಿಯಲ್ಲಿ ಮುಳುಗಿ ಏಳು ವರ್ಷದ ಬಾಲಕಿ ಸಾವನ್ನಪ್ಪಿರುವುದು ಗ್ರಾಮಸ್ಥರನ್ನು ಬೆಚ್ಚಿಬೀಳಿಸಿದೆ.

ಜೋಳದಡಗಿ ಗ್ರಾಮದ ಮೀನುಗಾರ ಕುಟುಂಬದ ಮರೇಮ್ಮ (7) ಪೋಷಕರೊಂದಿಗೆ ಬೆನಕನಹಳ್ಳಿ ಗ್ರಾಮದಲ್ಲಿ ನಡೆದ ಮಾರೇಮ್ಮ ದೇವಿಯ ಜಾತ್ರೆಗೆ ಆಗಮಿಸಿದ್ದಳು. ಜಾತ್ರೆಯ ಅಂಗವಾಗಿ ನದಿ ತೀರದಲ್ಲಿ ಜನಸಂದಣಿ ಹೆಚ್ಚಿದ್ದ ವೇಳೆ, ಬಾಲಕಿ ಅಜಾಗರೂಕತೆಯಿಂದ ನೀರಿನೊಳಗೆ ಜಾರಿಬಿದ್ದಿದ್ದಾಳೆ ಎಂದು ತಿಳಿದುಬಂದಿದೆ. ತಾಯಿ ಬಟ್ಟೆ ತೊಳೆಯುವ ಕಾರ್ಯದಲ್ಲಿ ನಿರತರಾಗಿದ್ದಾಗ ಮಗಳು ಕಣ್ಣಿಗೆ ಕಾಣದಂತೆ ನದಿ ನೀರಿನಲ್ಲಿ ಇಳಿದಿರುವುದು ದುರಂತಕ್ಕೆ ಕಾರಣವಾಯಿತು ಎನ್ನಲಾಗಿದೆ.

ಘಟನೆಯನ್ನು ಗಮನಿಸಿದ ಸ್ಥಳೀಯರು ತಕ್ಷಣವೇ ನೀರಿಗೆ ಧುಮುಕಿ ರಕ್ಷಣೆ ಕಾರ್ಯಾಚರಣೆ ನಡೆಸಿ, ಪ್ರಜ್ಞಾಹೀನ ಸ್ಥಿತಿಯಲ್ಲಿದ್ದ ಬಾಲಕಿಯನ್ನು ಹೊರತೆಗೆದಿದ್ದಾರೆ. ಬಳಿಕ ಹೆಚ್ಚಿನ ಚಿಕಿತ್ಸೆಗೆ ಬೆಂಡೆಬೆಂಬಳಿ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಸಾಗಿಸಲಾಯಿತಾದರೂ, ಚಿಕಿತ್ಸೆ ಫಲಕಾರಿಯಾಗದೆ ಬಾಲಕಿ ಮೃತಪಟ್ಟಿದ್ದಾಳೆ.

ಈ ದುರ್ಘಟನೆಯು ಜಾತ್ರಾ ಸಂದರ್ಭಗಳಲ್ಲಿ ಸುರಕ್ಷತಾ ಕ್ರಮಗಳ ಕೊರತೆ ಕುರಿತು ಗಂಭೀರ ಪ್ರಶ್ನೆಗಳನ್ನು ಎಬ್ಬಿಸಿದೆ. ನದಿ ತೀರದಲ್ಲಿ ಎಚ್ಚರಿಕಾ ಫಲಕಗಳ ಕೊರತೆ, ಮಕ್ಕಳ ಮೇಲಿನ ಸಮರ್ಪಕ ನಿಗಾವಹಿಸದಿರುವುದು ಹಾಗೂ ಜನಸಂದಣಿಯ ನಡುವೆ ಸುರಕ್ಷತಾ ವ್ಯವಸ್ಥೆಯ ಅಭಾವ ಈ ದುರಂತಕ್ಕೆ ಕಾರಣವಾಗಿದೆಯೇ ಎಂಬ ಚರ್ಚೆ ಗ್ರಾಮಸ್ಥರ ನಡುವೆ ಕೇಳಿಬರುತ್ತಿದೆ.

ಘಟನೆ ವಡಗೇರಾ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ನಡೆದಿದ್ದು, ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಳ್ಳಲಾಗಿದೆ. ಕುಟುಂಬದ ಆಕ್ರಂದನದ ನಡುವೆ ಗ್ರಾಮದಲ್ಲಿ ಮೌನ ವಾತಾವರಣ ನಿರ್ಮಾಣವಾಗಿದ್ದು, ಜಾತ್ರೆಯ ಸಂಭ್ರಮ ಶೋಕಾಚರಣೆಯಾಗಿ ಮಾರ್ಪಟ್ಟಿದೆ.

# ಇಬ್ಬರು ಕುಖ್ಯಾತ ಕಳ್ಳರ ಬಂಧಿಸಿ 26.5 ಲಕ್ಷ ರೂ.ಮೌಲ್ಯದ ಚಿನ್ನ, ಬೆಳ್ಳಿ ಆಭರಣ ವಶ



**ಕಲಬುರಗಿ,ಫೆ.26-**ಜಿಲ್ಲೆಯ ಸೇಡಂ ಮತ್ತು ಮಳಖೇಡ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ರಾತ್ರಿ ಮತ್ತು ಹಗಲು ಹೊತ್ತಿನಲ್ಲಿ ಮನೆಯೊಳಗೆ ನುಗ್ಗಿ ಚಿನ್ನ ಮತ್ತು ಬೆಳ್ಳಿ ಆಭರಣ ಕಳ್ಳತನ ಮಾಡುತ್ತಿದ್ದ ಇಬ್ಬರು ಕುಖ್ಯಾತ, ಖತರ್ನಾಕ್ ಕಳ್ಳರನ್ನು ಬಂಧಿಸಿ 26,5,400 ರೂ.ಮೌಲ್ಯದ ಚಿನ್ನ ಮತ್ತು ಬೆಳ್ಳಿ ಆಭರಣ ಜಪ್ತಿ ಮಾಡಲಾಗಿದೆ ಎಂದು ಎಸ್‌ಪಿ ಅಡ್ಡೂರು ಶ್ರೀನಿವಾಸಲು ತಿಳಿಸಿದರು.

ನಗರದ ಪೊಲೀಸ್ ಭವನದಲ್ಲಿ ಇಂದು ಸುದ್ದಿಗೋಷ್ಠಿಯನ್ನುದ್ದೇಶಿಸಿ ಮಾತನಾಡಿದ ಅವರು, ಸೇಡಂ ಮತ್ತು ಮಳಖೇಡ ಪೊಲೀಸ್ ಠಾಣೆಗಳ ವ್ಯಾಪ್ತಿಯಲ್ಲಿ ರಾತ್ರಿ ಮತ್ತು ಹಗಲು ಹೊತ್ತಿನಲ್ಲಿ ಮಳೆಯೊಳಗೆ ನುಗ್ಗಿ ಚಿನ್ನ ಮತ್ತು ಬೆಳ್ಳಿ ಆಭರಣ ಕಳ್ಳತನ ಮಾಡಿದ್ದ ಆರೋಪಿಗಳ ಬಂಧನಕ್ಕೆ ಎಸ್‌ಪಿ, ಹೆಚ್ಚುವರಿ ಎಸ್‌ಪಿ ಮಹೇಶ ಮೇಘಣ್ಣನವರ್, ಚಿಂಚೋಳಿ ಡಿಎಸ್‌ಪಿ ಸಂಗಮನಾಥ ಎಸ್.ಹಿರೇಮಠ ಅವರ ಮಾರ್ಗದರ್ಶನದಲ್ಲಿ ಸೇಡಂ ಸಿಪಿಐ ಮಹಾದೇವ ಡಿ.ಅವರ ನೇತೃತ್ವದಲ್ಲಿ ಸೇಡಂ ಠಾಣೆ ಪಿಎಸ್‌ಐಗಳಾದ ಉಪೇಂದ್ರಕುಮಾರ, ಶರಣಪ್ಪ, ಅಪರಾಧ ಪತ್ತೆದಳದ ಸಿಬ್ಬಂದಿಗಳಾದ ಮೋಹನರೆಡ್ಡಿ, ಯಲಗೂರೇಶ, ಸಂತೋಷ, ಮಾರುತಿ, ಬಸಲಿಂಗಪ್ಪ, ಬಲರಾಮ, ಹೊನ್ನಪ್ಪ, ನಾಗರಾಜ, ಬಾಲಕೃಷ್ಣ ರೆಡ್ಡಿ, ಸದಾಶಿವ, ಮಾಣಿಕರಾವ ಮತ್ತು ನಾಗರಾಜ ಅವರನ್ನು ಒಳಗೊಂಡ ತಂಡ ರಚಿಸಲಾಗಿತ್ತು.

ಈ ತಂಡ ವಿವಿಧ ಆಯಾಮಗಳಲ್ಲಿ ತನಿಖೆ ನಡೆಸಿ ಆಳಂದ ತಾಲ್ಲೂಕಿನ ಝುಳಕಿ ತಾಂಡಾದ ಕರಣ್ ತಂದೆ ರಂಗು ಪವಾರ (26) ಮತ್ತು ಕಂಸರನಾಯಕ ತಾಂಡಾದ ರಾಮದಾಸ ತಂದೆ ಗಂಗಾರಾಮ ಚವ್ಹಾಣ್ (45) ಎಂಬುವವರನ್ನು ಬಂಧಿಸಿ 25,57,500 ರೂ.ಮೊತ್ತದ 15.5 ಗ್ರಾಂ.ಬಂಗಾರದ ಆಭರಣಗಳು, 96,900 ರೂ.ಮೌಲ್ಯದ 340 ಗ್ರಾಂ.ಬೆಳ್ಳಿ ಆಭರಣಗಳು ಸೇರಿ 26,5,400 ರೂ.ಮೌಲ್ಯದ ಚಿನ್ನ ಮತ್ತು ಬೆಳ್ಳಿ ಆಭರಣಗಳನ್ನು ವಶಪಡಿಸಿಕೊಳ್ಳುವಲ್ಲಿ ಯಶಸ್ವಿಯಾಗಿದೆ ಎಂದು ವಿವರಿಸಿದರು.

ಕುಖ್ಯಾತ ಕಳ್ಳರನ್ನು ಬಂಧಿಸಿ ಚಿನ್ನ, ಬೆಳ್ಳಿ ಆಭರಣ ವಶ ಪಡಿಸಿಕೊಳ್ಳುವಲ್ಲಿ ಯಶಸ್ವಿಯಾದ ಪೊಲೀಸ್ ಅಧಿಕಾರಿಗಳು ಮತ್ತು ಸಿಬ್ಬಂದಿ ಕಾರ್ಯವನ್ನು ಅವರು ಶ್ಲಾಘಿಸಿದರು.

ಹೆಚ್ಚುವರಿ ಎಸ್‌ಪಿ ಮಹೇಶ ಮೇಘಣ್ಣನವರ್, ಚಿಂಚೋಳಿ ಡಿಎಸ್‌ಪಿ ಸಂಗಮನಾಥ ಎಸ್.ಹಿರೇಮಠ, ಸೇಡಂ ಸಿಪಿಐ ಮಹಾದೇವ ಡಿ., ಸೇಡಂ ಠಾಣೆ ಪಿಎಸ್‌ಐಗಳಾದ ಉಪೇಂದ್ರಕುಮಾರ, ಶರಣಪ್ಪ ಅವರು ಸುದ್ದಿಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

ಸುದ್ದಿ ಮತ್ತು ಜಾಹೀರಾತಿಗಾಗಿ ಸಂಪರ್ಕಿಸಿ
6360866626

# ಆರೋಗ್ಯ-ಕೃಷಿ ಸಂರಕ್ಷಣೆಗೆ ಸಿರಿಧಾನ್ಯ ಕ್ರಾಂತಿ ಅವಶ್ಯ: ಶಾಸಕ ಚೆನ್ನಾರೆಡ್ಡಿ ಪಾಟೀಲ್ ತುನ್ನೂರು

**ಯಾದಗಿರಿ:ಫೆ.26:**ಪೌಷ್ಟಿಕ ಆಹಾರ ಪದ್ಧತಿಗೆ ಮರಳುವ ಮೂಲಕ ಜನಾರೋಗ್ಯ ಮತ್ತು ಮಣ್ಣಿನ ಸಿರಿವಂತಿಕೆಯನ್ನು ಕಾಪಾಡುವುದು ಅತ್ಯಾವಶ್ಯಕ ಎಂದು ಶಾಸಕ ಚೆನ್ನಾರೆಡ್ಡಿ ಪಾಟೀಲ್ ಹೇಳಿದರು. ನಗರದ ಹೊಸ ಬಸ್ ನಿಲ್ದಾಣ ಆವರಣದಲ್ಲಿ ಜಿಲ್ಲಾಡಳಿತ, ಜಿಪಂ, ಕೃಷಿ ಇಲಾಖೆ ಮತ್ತು ಜಿಲ್ಲಾ ಕೃಷಿಕ ಸಮಾಜದ ಸಂಯುಕ್ತ ಆಶ್ರಯದಲ್ಲಿ ಆಯೋಜಿಸಿದ್ದ "ಸಿರಿಧಾನ್ಯ ಜಾಗೃತಿ ನಡಿಗೆ"ಗೆ ಚಾಲನೆ ನೀಡಿ ಮಾತನಾಡಿದ ಅವರು.

ಸಿರಿಧಾನ್ಯಗಳು ಕೇವಲ ಆಹಾರವಲ್ಲ, ಅದು ಆರೋಗ್ಯದ ಭದ್ರತಾ ಕವಚ ಎಂದು ಅವರು ವಿವರಿಸಿದರು. ಜೋಳ, ಸಜ್ಜೆ, ನವಣೆ, ಕಣಿವಿ ಮುಂತಾದ ಧಾನ್ಯಗಳು ದೇಹಕ್ಕೆ ಅಗತ್ಯ ಪೌಷ್ಟಿಕಾಂಶ ಒದಗಿಸಿ ರೋಗನಿರೋಧಕ ಶಕ್ತಿಯನ್ನು ವೃದ್ಧಿಸುತವೆ. ಆದರೆ ಆಧುನಿಕ ಜೀವನಶೈಲಿ ಹಾಗೂ ಫಾಸ್ಟ್ ಫುಡ್ ಸಂಸ್ಕೃತಿಯಿಂದ ಜನರು ಸಾಂಪ್ರದಾಯಿಕ ಆಹಾರ ಪದ್ಧತಿಯಿಂದ ದೂರವಾಗುತ್ತಿರುವುದು ಆತಂಕಕಾರಿಯಾಗಿದೆ ಎಂದರು.

ಜಿಲ್ಲೆಯಲ್ಲಿ ಈಗಾಗಲೇ ಸಾವಿರಾರು ಎಕರೆ ಪ್ರದೇಶದಲ್ಲಿ ಸಿರಿಧಾನ್ಯ ಬೆಳೆ ಬೆಳೆದಿರುವುದು ಶ್ಲಾಘನೀಯ. ಈ ವ್ಯಾಪ್ತಿಯನ್ನು ಇನ್ನಷ್ಟು ವಿಸ್ತರಿಸಲು ಕೃಷಿ ಇಲಾಖೆ ತಾಂತ್ರಿಕ ನೆರವು ಮತ್ತು ಮಾರುಕಟ್ಟೆ ವ್ಯವಸ್ಥೆ ಬಲಪಡಿಸಬೇಕು. ಗ್ರಾಮ ಮಟ್ಟದಿಂದಲೇ ಶಾಲೆ, ಕಾಲೇಜುಗಳಲ್ಲಿ ಸಿರಿಧಾನ್ಯ ಮಹತ್ವದ ಕುರಿತು ವಿಶೇಷ ಅಭಿಯಾನ ರೂಪಿಸಬೇಕೆಂದು ಸೂಚಿಸಿದರು.

ಹೊರರಾಜ್ಯಗಳ ವ್ಯಾಪಾರಿಗಳು ಫಲವತ್ತಾದ ಭೂಮಿಯನ್ನು ಲೀಜ್ ಪಡೆದು ಹೆಚ್ಚು ಲಾಭದಾಯಕ ಬೆಳೆಗಳನ್ನು ಬೆಳೆಸಿ ಮಣ್ಣಿನ ಶಕ್ತಿಯನ್ನು ಕುಗ್ಗಿಸುತ್ತಿರುವುದು ದುರಂತಕರ ಬೆಳವಣಿಗೆ. ಇದರಿಂದ ಸಾಂಪ್ರದಾಯಿಕ ಬೆಳೆ ಪದ್ಧತಿ ಹಿನ್ನಡೆಯಾಗುತ್ತಿದೆ.




ರೈತರು ಮಣ್ಣಿನ ಆರೋಗ್ಯ ಕಾಪಾಡುವ ಬೆಳೆಗಳತ್ತ ಮರಳಬೇಕು ಎಂದು ಕರೆ ನೀಡಿದರು.

ಜಿಲ್ಲಾಧಿಕಾರಿ ಹರ್ಷಲ್ ಭೋಯರ್ ಮಾತನಾಡಿ, ಹಿಂದೆ ನಮ್ಮ ರೈತರು ಸಿರಿಧಾನ್ಯಗಳನ್ನು ಹೆಚ್ಚಾಗಿ ಬೆಳೆಯುತ್ತಿದ್ದರು. ಆದರೆ ಹೆಚ್ಚಿನ ಉತ್ಪಾದನೆಗಾಗಿ ಬೆಳೆ ವೈವಿಧ್ಯತೆ ಕಡಿಮೆಯಾಗಿದೆ. ಸರ್ಕಾರ ಸಿರಿಧಾನ್ಯ ಬೆಳೆ ಮತ್ತು ಬಳಕೆಗೆ ಅನುದಾನ ಹಾಗೂ ಪ್ರೋತ್ಸಾಹ ನೀಡುತ್ತಿದೆ ಎಂದು ತಿಳಿಸಿದರು.

ಎಸ್‌ಪಿ ಪೃಥ್ವಿಕ ಶಂಕರ್ ಮಾತನಾಡಿ, "ಆರೋಗ್ಯವೇ ಮಹಾಸಂಪತ್ತು" ಎಂದು ಹೇಳಿ, ಜೀವನಶೈಲಿ ಬದಲಾವಣೆಯಿಂದ ಉಂಟಾಗುತ್ತಿರುವ ಆರೋಗ್ಯ ಸಮಸ್ಯೆಗಳನ್ನು ತಡೆಯಲು ಸಿರಿಧಾನ್ಯ ಬಳಕೆ ಪರಿಣಾಮಕಾರಿ ಎಂದರು.

ಹಿರಿಯ ಮುಖಂಡ ರಾಚಣ್ಣಗೌಡ ಮುದ್ನಾಳ್ ರೈತರಿಗೆ ಸಮರ್ಪಕ ಬೆಲೆ ಮತ್ತು ಮಾರುಕಟ್ಟೆ ಸೌಲಭ್ಯ ಒದಗಿಸಿದರೆ ಸಿರಿಧಾನ್ಯ ಉತ್ಪಾದನೆ ಮತ್ತಷ್ಟು ಹೆಚ್ಚಲಿದೆ ಎಂದು ಅಭಿಪ್ರಾಯಪಟ್ಟರು.

ಕೃಷಿ ಇಲಾಖೆ ಜಂಟಿ ನಿರ್ದೇಶಕ ರತೇಂದ್ರನಾಥ ಸೂಗುರ ಕಾರ್ಯಕ್ರಮದ ಉದ್ದೇಶವನ್ನು ವಿವರಿಸಿ, ಸಿರಿಧಾನ್ಯ ಬಳಕೆಯಿಂದ ರೈತರ ಆರ್ಥಿಕ ಸಬಲೀಕರಣ ಮತ್ತು ಸಾರ್ವಜನಿಕ ಆರೋಗ್ಯ ಎರಡನ್ನೂ ಸಾಧಿಸುವ ಗುರಿಯಿದೆ ಎಂದರು.

ಹೊಸ ಬಸ್ ನಿಲ್ದಾಣದಿಂದ ಪ್ರಾರಂಭವಾದ ಜಾಥಾ ಪ್ರಮುಖ ರಸ್ತೆಗಳನ್ನು ಸುತ್ತಿ ಸರ್ಕಾರಿ ಪದವಿ ಕಾಲೇಜಿನಲ್ಲಿ ಸಮಾರೋಪಗೊಂಡಿತು. ಭಾಗವಹಿಸಿದ ಸಾವಿರಾರು ನಾಗರಿಕರಿಗೆ ಸಿರಿಧಾನ್ಯ ಪಾನೀಯ ವಿತರಿಸಿ, ಅದರ ಪೌಷ್ಟಿಕತೆ ಕುರಿತು ಮಾಹಿತಿ ನೀಡಲಾಯಿತು.

ಹೆಚ್ಚುವರಿ ಎಸ್ ಪಿ ಧರಣೇಶ, ಡಿವೈಎಸ್ ಪಿ ಭರತಕುಮಾರ ತಳವಾರ, ಉಪ ಕೃಷಿ ನಿರ್ದೇಶಕ ಹಂಪಣ್ಣ ವೈ.ಎಲ್., ವಿವಿಧ ತಾಲೂಕು ಕೃಷಿ ಅಧಿಕಾರಿಗಳಾದ ರಾಜಕುಮಾರ, ಸುರೇಶ ಬಿ., ರಾಮಣ್ಣಗೌಡ, ಸುನೀಲಕುಮಾರ, ರವಿಕುಮಾರ, ವಿಶ್ವಾರಾಧ್ಯ,ಎಬಿಎಆರ್ ಡಿ ಅಧಿಕಾರಿ ಯಮುನಾ, ಡಿಎಚ್ ಒ ಡಾ.ಮಹೇಶ ಬಿರಾದಾರ, ಕೃಷಿ ಇಲಾಖೆ ತಾಂತ್ರಿಕ ಅಧಿಕಾರಿ ಯಾಮರೆಡ್ಡಿ, ಕಛೇರಿ ಅಧಿಕ್ಷಕಾರದ ವೆಂಕಟೇಶ ಹಿರೆನೂರ್, ಮುಖಂಡರಾದ ಶರಣಗೌಡ ಮಾಲಿಪಾಟೀಲ್ , ಬಸವರಾಜ ಮೊಟನಳ್ಳಿ, ತಾಲೂಕು ಕೃಷಿಕ ಸಮಾಜದ ಅಧ್ಯಕ್ಷ ವೆಂಕಟರೆಡ್ಡಿ ತಂಗಡಗಿಶರಣಗೌಡ ಬಲಕಲ್, ಕೃಷಿ ಇಲಾಖೆ ಸಿಬ್ಬಂದಿ ಸೇರಿದಂತೆ ಇತರರಿದ್ದರು.

# ಮೋದಿ ನಮಗೆ ಸಹೋದರ

**ಜೆರುಸಲೆಮ್,ಫೆ.26–** ಭಾರತದ ಪ್ರಧಾನಿ ನರೇಂದ್ರ ಮೋದಿ ಅವರು ಸ್ನೇಹಿತನಿಗಿಂತ ಹೆಚ್ಚು , ಅವರೊಬ್ಬ ಸಹೋದರ ಎಂದು ಇಸ್ರೇಲ್ ಪ್ರಧಾನಿ ಬೆಂಜಮಿನ್ ನೇತನ್ಯಾಹು ಬಣ್ಣಿಸಿದ್ದಾರೆ. ಇದೇ ವೇಳೆ 2023ರ ಅಕ್ಟೋಬರ್ 7 ರ ಘೋರ ದಾಳಿಯ ನಂತರ ಇಸ್ರೇಲ್ ಪರವಾಗಿ ಭಾರತಕ್ಕಾಗಿ ನಿಂತಿದ್ದಕ್ಕಾಗಿ ಅವರಿಗೆ ಧನ್ಯವಾದ ಅರ್ಪಿಸಿದ್ದಾರೆ

ಹಮಾಸ್ ನಡೆಸಿದ ಮಾರಕ ದಾಳಿಯನ್ನು ಖಂಡಿಸಿದ ಮೊದಲ ವಿಶ್ವ ನಾಯಕರಲ್ಲಿ ಪ್ರಧಾನಿ ನರೇಂದ್ರ ಮೋದಿ ಕೂಡ ಒಬ್ಬರು. ಸುಮಾರು 1,200 ಇಸ್ರೇಲಿಗಳು ಸಾವನ್ನಪ್ಪಿದ್ದಾರೆ ಮತ್ತು ಸುಮಾರು 250 ಜನರು ಅಪಹರಿಸಲ್ಪಟ್ಟಿದ್ದ ಘಟನೆ ಇದು, ಇಸ್ರೇಲ್ ಬೆಂಬಲಕ್ಕೆ ನಿಂತ ಭಾರತಕ್ಕೆ ಕೃತಜ್ಞತೆಗಳು ಎಂದಿದ್ದಾರೆ

ಪ್ರೀತಿಯ ಸ್ನೇಹಿತ ನರೇಂದ್ರ ಮೋದಿ ಅವರೇ ನಿಮ್ಮ ಭೇಟಿಯಿಂದ ವಿಶೇಷವಾಗಿ ಭಾವುಕನಾಗಿದ್ದೇನೆ. ಇಸ್ರೇಲ್ ಉತ್ತಮ ಸ್ನೇಹಿತ ಮತ್ತು ವಿಶ್ವ ವೇದಿಕೆಯಲ್ಲಿ ಉತ್ತಮ ನಾಯಕ. ನರೇಂದ್ರ ಮೋದಿ ಅವರು ಸ್ನೇಹಿತನಿಗಿಂತ ಹೆಚ್ಚು. ನೀವು ಒಬ್ಬ ಸಹೋದರ ಎಂದು ಹೇಳಿದ್ದಾರೆ

ಶೂಗಳನ್ನು ತೆಗೆದು ಸಮುದ್ರದಲ್ಲಿ ನಡೆದೆವು. ನೀರಿನ ಮೇಲೆ ನಡೆಯಲಿಲ್ಲ, ಆದರೆ, ಪವಾಡ 2017 ರಲ್ಲಿ ಪ್ರಧಾನಿಯಾಗಿ ಮೋದಿ ಇಸ್ರೇಲ್‌ಗೆ ಮೊದಲ ಭೇಟಿ ನೀಡಿದ ಸಂದರ್ಭದಲ್ಲಿ ಇಬ್ಬರು ನಾಯಕರು ಸಾಗರದಲ್ಲಿ ಬರಿಗಾಲಿನಲ್ಲಿ ಕಾಣಿಸಿಕೊಂಡ ವೈರಲ್ ಚಿತ್ರ ಉಲ್ಲೇಖಿಸಿದ್ದಾರೆಉಭಯ ದೇಶಗಳ ನಡುವೆ ದ್ವಿಪಕ್ಷೀಯ ವ್ಯಾಪಾರ ಹೇಗೆ ದ್ವಿಗುಣಗೊಂಡಿದೆ ಉಭಯ



ನಾಯಕರ ನಡುವಿನ ವೈಯಕ್ತಿಕ ಬಾಂಧವ್ಯದ ಬಗ್ಗೆ ಇಸ್ರೇಲ್‌ನಲ್ಲಿ ಹೆಚ್ಚು ಪ್ರಚಾರ ಮಾಡಲಾಗಿದೆ. ಇಂಬು ನೀಡುವಂತೆ ನೆಸ್ಸೆಟ್‌ನಲ್ಲಿಯೂ ಸಹ ಇಬ್ಬರ ನಾಯಕರ ನಡುವಣ ದೀರ್ಘ ಅಪ್ಪುಗೆ ಸಂಸದರಲ್ಲಿ ಪುಳಕ ಉಂಟು ಮಾಡಿದೆ

ಭಾರತವನ್ನು ದೈತ್ಯ ದೇಶ ಎಂದು ವಿವರಿಸಿದ ಅವರು, ನಾಗರಿಕತೆಗಳು ಅಭಿವೃದ್ಧಿ ಹೊಂದಿದ ಎರಡು ಸ್ಥಳಗಳೆಂದರೆ ಸಿಂಧೂ ಕಣಿವೆ ಮತ್ತು ಜೋರ್ಡಾನ್ ಕಣಿವೆ. ನಾವಿಬ್ಬರೂ ಕಾಲದ ಯುಗಗಳನ್ನು ದಾಟಿ, ಬ್ರಿಟಿಷ್ ಆಳ್ವಿಕೆಯಿಂದ ಹೊರಬಂದೆವು. ನಾವು ಅನೇಕ ವೈಶಿಷ್ಟ್ಯಗಳನ್ನು ಹಂಚಿಕೊಂಡಿದ್ದೇವೆ. ಅರ್ಥವಾಗುವ ಜನರಿಗೆ ನಮ್ಮ ಪ್ರಜಾಪ್ರಭುತ್ವವನ್ನು ಕಾಪಾಡಿಕೊಳ್ಳುತ್ತೇವೆ ಎಂದು ಹೇಳಿದ್ದಾರೆ

ಅಕ್ಟೋಬರ್ 7 ರಂದು ನಡೆದ ಭೀಕರ ದಾಳಿಯ ನಂತರ, ಇಸ್ರೇಲ್ ಅನ್ನು ನೈತಿಕವಾಗಿ ಬೆಂಬಲಿಸಿದ್ದು ಮೊದಲು ಬಾರತ ಎಂದ ಅವರು ಇಸ್ರೇಲ್ ಬೆನ್ನ ಹಿಂದೆ ನಿಂತಿದ್ದೀರಿ ಮತ್ತು ಯಹೂದಿಗಳಿಗೆ ಬೆಂಬಲ ಸೂಚಿಸಿದ್ದೀರಿ. ನಿಮಗೆ ಧನ್ಯವಾದಗಳು ಎಂದು ತಿಳಿಸಿದರು

ಇಸ್ಲಾಮಿಕ್ ಭಯೋತ್ಪಾದನೆಯ ಅನಾಗರಿಕತೆಯ ವಿರುದ್ಧ ಇಸ್ರೇಲ್ ನಾಗರಿಕತೆಯು ಮುಂಚೂಣಿಯಲ್ಲಿದೆ. ಆದರೆ, ಈ ಜ್ವಾಲಾಮುಖಿಯ ಲಾವಾ ಪ್ರಪಂಚದಾದ್ಯಂತ ಹರಡಿದೆ. ಭಾರತ ಇಸ್ರೇಲ್ ಅನ್ನು ಬೆಂಬಲಿಸುತ್ತದೆ ಏಕೆಂದರೆ ಇಸ್ರೇಲ್ ಅನಾಗರಿಕತೆಯ ವಿರುದ್ಧ ಕಬ್ಬಿಣದ ಗೋಡೆಯಾಗಿ ನಿಂತಿದೆ. ಅಸ್ಥಿರ ಅವ್ಯವಸ್ಥೆಯ ಪ್ರದೇಶದಲ್ಲಿ ಪ್ರಜಾಪ್ರಭುತ್ವದ ಭದ್ರಕೋಟೆಯಾಗಿದೆ ಎಂದು ಹೇಳಿದ್ದಾರೆ.

ದಿಪಕ್ಷೀಯ ಸಂಬಂಧಕ್ಕೆ ಆದ್ಯತೆ–ಭಾರತ– ಇಸ್ರೇಲ್ ನಡುವೆ ದ್ವಿಪಕ್ಷೀಯ ಸಂಬಂಧಗಳನ್ನು ಮತ್ತಷ್ಟು ಎತ್ತರಕ್ಕೆ ಕೊಂಡೊಯ್ಯುವುದಾಗಿ ಪ್ರತಿಜ್ಞೆ ಮಾಡಿದ ಇಸ್ರೇಲ್ ಪ್ರಧಾನಿ ಬೆಂಜಮಿನ್ ನೇತನ್ಯಾಹು ಪ್ರತೀಜ್ಞೆ ಮಾಡಿದ್ಧಾರೆ

ವೈಯಕ್ತಿಕ ಮತ್ತು ರಾಜತಾಂತ್ರಿಕ ಸಂಬಂಧಗಳನ್ನು ಬಿಗಿಗೊಳಿಸಲು, ರಕ್ಷಣೆ, ಆರ್ಥಿಕತೆ, ವ್ಯಾಪಾರ, ಸೈಬರ್, ಂಖ ಮತ್ತು ಬಾಹ್ಯಾಕಾಶ ತಂತ್ರಜ್ಞಾನದ ಸಹಕಾರ ಹೆಚ್ಚಿಸಲು ಮತ್ತು ಮಹತ್ವಾಕಾಂಕ್ಷೆಯ ಖಯೋಜನೆ ಯಶಸ್ವಿ ಅನುಷ್ಠಾನಕ್ಕೆ ಕೆಲಸ ಮಾಡುವುದಾಗಿ ಹೇಳಿದ್ದಾರೆ

## ಮರೆಯಾದ ನೀರಿನ ಚೀಲ




**ಕಲಬುರಗಿ:** ಈ ದಪ್ಪವಾದ ಬಟ್ಟೆಚೀಲದ ಬಗ್ಗೆ ಇಂದಿನ ಪೀಳಿಗೆಯವರಿಗೆ ಅಷ್ಟಾಗಿ ಪರಿಚಯವಿಲ್ಲ. ಇದನ್ನೇ ಚಾಗನೀರಿನ ಚೀಲ" ಎಂದು ಕರೆಯುವರು. ಎಂಬತ್ತು ತೊಂಬತ್ತರ ದಶಕದಲ್ಲಿ ಹೆಚ್ಚಾಗಿ ಬಳಕೆಯಲ್ಲಿದ್ದ ಇತ್ತು. ಇದರಲ್ಲಿ ನೀರು ತುಂಬಿ ಗಾಳಿಯಿರುವೆಡೆಗೆ ನೇತು ಹಾಕಿದರೆ ಕ್ಷಣಾರ್ಧದಲ್ಲಿ ತಣ್ಣಗಾಗುತಿತ್ತು.

ಎಲ್ಲಿಯಾದರೂ ತೆಗೆದುಕೊಂಡು ಹೋಗುವದು ಸುಲಭವಾಗಿತ್ತು. ಇದು ಒಂದು ರೀತಿ ಬಡವರ ಪ್ರಿಜ್ ಅಥವಾ ಮೊಬೈಲ್ ಫ್ರಿಜ್ ಆಗಿತ್ತು.ಮಾರುಕಟ್ಟೆಯಲ್ಲಿ ಬಾಟಲಿ ನೀರಿರಲಿಲ್ಲ. ನೀರಿನ ವ್ಯವಹಾರವಿರಲಿಲ್ಲ. ಬೇಸಿಗೆಯಲ್ಲಿ ಪ್ರವಾಸ ಹೋಗುವಾಗ ರೈಲಿನ ಹೊರಗೆ ಕಿಟಕಿಗೆ, ಜೀಪಿನ ಹೊರಗಡೆ, ಎತ್ತಿನ ಬಂಡಿಗೆ ಕಟ್ಟಿಕೊಂಡು ಹೋಗುತಿದ್ದ ದೃಶ್ಯ ಸಾಮಾನ್ಯವಾಗಿತ್ತು.ದಪ್ಪ ಬಟ್ಟೆಯ( ಕ್ಯಾನ್ವಸ್ ) ಚೀಲವಾಗಿರುವುದರಿಂದ ಹೊರಗಿನ ಗಾಳಿ ಆ ಚೀಲದ ರಂಧ್ರದ ಮುಖಾಂತರ ಒಳ ಹೋಗಿ ನೀರು ತಣ್ಣಗಾಗುತಿತ್ತು.

ಗುರುರಾಜ. ಪಟ್ಟಣಶೆಟ್ಟಿ

# ರೈತ, ಬಡವರ ಸೇವೆಗೆ ನಿರಾಣಿ ಗ್ರೂಪ್ ಬದ್ಧ

**ಬೀದರ್: ಫೆ.26:**ರೈತರು, ಬಡವರು, ಹಿಂದುಳಿದವರು, ಸಣ್ಣ ಉದ್ಯಮಿದಾರರಿಗೆ ಆರ್ಥಿಕ ಶಕ್ತಿ ತುಂಬಲು ಮುಧೋಳ ಮೂಲದ ಮುರುಗೇಶ ರುದ್ರಪ್ಪ ನಿರಾಣಿ (ಎಂಆರ್‌ಎನ್) ಉದ್ಯೋಗ ಸಮೂಹ ಸಂಸ್ಥೆಯ ವಿಜಯ ಸೌಹಾರ್ದ ಕ್ರೆಡಿಟ್ ಸಹಕಾರಿ ಸಂಘ ಬದ್ಧತೆಯಿಂದ ಕಾರ್ಯನಿರ್ವಹಿಸುತ್ತಿದೆ ಎಂದು ಸಂಸ್ಥೆ ನಿರ್ದೇಶಕರೂ ಆದ ವಿಧಾನ ಪರಿಷತ್ ಸದಸ್ಯ ಹಣಮಂತ ನಿರಾಣಿ ಹೇಳಿದರು.

ಇಲ್ಲಿನ ಪಾಪನಾಶ ಗೇಟ್ ಹತ್ತಿರದ ಸಾಯಿ ಕ್ಲಾಥ್ ಪಕ್ಕ ಸುಸಜ್ಜಿತ ಕಚೇರಿಯಲ್ಲಿ ಬುಧವಾರ ವಿಜಯ ಸೌಹಾರ್ದ ಸಹಕಾರಿ ಸಂಘದ 70ನೇ ಶಾಖೆ ಲೋಕಾರ್ಪಣೆ ಸಮಾರಂಭದಲ್ಲಿ ಮಾತನಾಡಿದ ಅವರು, ಹಿಂದುಳಿದ ಬೀದರ್ ಜಿಲ್ಲೆಯ ಜನರಿಗೆ ವಿಶೇಷವಾಗಿ ಕೃಷಿಕರ ಆರ್ಥಿಕ ಸ್ಥಿತಿ ಸುಧಾರಣೆಗೆ ಪೂರಕವಾಗಿ ವಿಜಯ ಸೌಹಾರ್ದ ಕೆಲಸ ಮಾಡಲಿದೆ. ಈ ವರ್ಷಾಂತ್ಯಕ್ಕೆ ಬ್ಯಾಂಕ್ ಶಾಖೆ 100ಕ್ಕೇರಿಸುವ ಉದ್ದೇಶವಿದೆ. ಕಕ ಭಾಗದಲ್ಲಿ ಇನ್ನಷ್ಟು ಶಾಖೆ ತಾಲೂಕು ಕೇಂದ್ರಗಳಲ್ಲೂ ಸ್ಥಾಪಿಸಲಾಗುತ್ತದೆ ಎಂದರು.

32 ವರ್ಷ ಹಿಂದೆ ಸ್ಥಾಪಿತ ನಿರಾಣಿ ಗ್ರೂಪ್ 21ಕ್ಕೂ ಹೆಚ್ಚು ಕಂಪನಿ ಹೊಂದಿದ್ದು, 8 ಸಾವಿರ ಜನರಿಗೆ ಉದ್ಯೋಗ ಕೊಟ್ಟಿದೆ. 2007 ರಲ್ಲಿ ಸ್ಥಾಪಿತ ವಿಜಯ ಸೌಹಾರ್ದ 45 ಸಾವಿರ ಕೋಟಿ ವ್ಯವಹಾರ ನಡೆಸುತ್ತಿದೆ. 3200 ಕೋಟಿ ಡೆಪಾಸಿಟ್ ಹೊಂದಿ ಠೇವಣಿದಾರರ ವಿಶ್ವಾಸವನ್ನು ಗಳಿಸಿದೆ. 2600 ಕೋಟಿ ಸಾಲ ವಿತರಿಸಿದೆ. 500 ಕೋಟಿ ಹಣ ವಿವಿಧ ಬ್ಯಾಂಕ್‌ಗಳಲ್ಲಿ ಠೇವಣಿ ಇಟ್ಟಿದೆ. ಸದಸ್ಯರಿಗೆ ಶೇ.23–25 ರಷ್ಟು ಲಾಭಾಂಶ ಹಂಚುವ ರಾಜ್ಯದ ಏಕೈಕ ಸಹಕಾರಿಯಾಗಿದೆ. 500ಕ್ಕೂ ಹೆಚ್ಚು ಸಿಬ್ಬಂದಿ ಬ್ಯಾಂಕ್‌ನಲ್ಲಿದ್ದಾರೆ. ಪ್ರತಿ ವರ್ಷ 7 ಕೋಟಿಯಷ್ಟು ಲಾಭ ಗಳಿಸುತ್ತಿದೆ. ಜನಪರ, ರೈತಪರ ಕಾಳಜಿಯುಳ್ಳ ಶಾಸಕ ಡಾ. ಶೈಲೇಂದ್ರ ಬೆಲ್ದಾಳೆ ನೇತೃತ್ವದಲ್ಲಿ ಇಲ್ಲಿನ ಬ್ಯಾಂಕ್ ಶಾಖೆ ಗ್ರಾಹಕ ಸ್ನೇಹಿ, ರಾಜ್ಯದಲ್ಲೇ ಮಾದರಿಯಾಗಿ ಬೆಳೆಯಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಬಸವಕಲ್ಯಾಣ ಅನುಭವ ಮಂಟಪ ಅಧ್ಯಕ್ಷ ಶ್ರೀ ಡಾ.ಬಸವಲಿಂಗ ಪಟ್ಟದ್ದೇವರು, ತಡೋಳಾದ ಶ್ರೀ ರಾಜೇಶ್ವರ ಶಿವಾಚಾರ್ಯರು ಶಾಖೆ ಉದ್ಘಾಟಿಸಿ ಆಶೀರ್ವಚನ ನೀಡಿ, ನಿರಾಣಿ ಗ್ರೂಪ್ ಉದ್ಯಮ ಕ್ಷೇತ್ರದಲ್ಲಿ ಕ್ರಾಂತಿ ಮಾಡಿದೆ. ಲಕ್ಷಾಂತರ ಜನರ ಬಾಳಿಗೆ ಬೆಳಕಾಗಿದೆ. ಹಿಂದುಳಿದ ಜಿಲ್ಲೆ ಆರ್ಥಿಕ ಪ್ರಗತಿಗೆ ವಿಜಯ ಶಾಖೆ ಕೊಡುಗೆ ನೀಡಲಿ. ಭಾಲ್ಕಿ, ಬಸವಕಲ್ಯಾಣ ಸೇರಿ ಜಿಲ್ಲೆಯ ಎಲ್ಲ ತಾಲೂಕುಗಳಲ್ಲಿ ಶಾಖೆ ಆರಂಭವಾಗಲಿ ಎಂದರು.

ಬೀದರ್ ಶಾಖೆ ಸಲಹಾ ಸಮಿತಿ ನಿರ್ದೇಶಕ ಮಂಡಳಿ ಮುಖ್ಯಸ್ಥರಾದ ಶಾಸಕ ಡಾ.ಶೈಲೇಂದ್ರ ಬೆಲ್ದಾಳೆ ಅಧ್ಯಕ್ಷತೆ ವಹಿಸಿ ಮಾತನಾಡಿ, ರಾಷ್ಟ್ರೀಕೃತ ಬ್ಯಾಂಕ್ ಮಾದರಿಯಲ್ಲಿ ಗಣಕೀಕೃತ ಕೋರ್ ಬ್ಯಾಂಕಿಂಗ್ ವ್ಯವಸ್ಥೆಯಡಿ ಎಲ್ಲ ಸೇವೆ ನೀಡಲಾಗುತ್ತಿದೆ. ಎಮ್‌ಎಂಎಸ್, ಠೇವಣಿ ಮೇಲೆ ಶೇ.12.5ರವರೆಗೆ ಆಕರ್ಷಕ ಬಡ್ಡಿ ದರ, ಆರ್‌ಟಿಜಿಎಸ್, ನೆಫ್ಟ್, ಪೇ ಆಪ್ ಆನ್‌ಲೈನ್ ವ್ಯವಸ್ಥೆ ಕಲ್ಪಿಸಲಾಗಿದೆ. ಬಹುಕೋಟಿ ವ್ಯವಹಾರದ ಶಾಖೆ ಇಲ್ಲಿ ಆರಂಭವಾಗಿದ್ದರಿಂದ ಗಡಿ ಜಿಲ್ಲೆಗೆ ನಿರಾಣಿ ಗ್ರೂಪ್ ಯುಗಾದಿ ಮುನ್ನ ಗಿಫ್ಟ್ ಕೊಟ್ಟಿದೆ. ಜಿಲ್ಲೆಯ ಜನರು ಇದರ ಲಾಭ ಪಡೆಯಲು ಕೋರಿದರು.

ವಿಧಾನ ಪರಿಷತ್ ಮಾಜಿ ಸಭಾಪತಿ ರಘುನಾಥರಾವ ಮಲ್ಕಾಪುರೆ, ಹುಮನಾಬಾದ್ ಶಾಸಕ ಡಾ.ಸಿದ್ದಲಿಂಗಪ್ಪ ಪಾಟೀಲ್, ಮಾತನಾಡಿದರು, ಮಾಜಿ ಶಾಸಕ ಪ್ರಕಾಶ ಖಂಡ್ರೆ ಮಾತನಾಡಿದರು. ರಾಜ್ಯ ಮಹಿಳಾ ಸಹಕಾರ ಮಹಾಮಂಡಳ ಅಧ್ಯಕ್ಷೆ ಶಕುಂತಲಾ ಬೆಲ್ದಾಳೆ, ಬಿಜೆಪಿ ಜಿಲ್ಲಾಧ್ಯಕ್ಷ ಸೋಮನಾಥ ಪಾಟೀಲ್, ಬಿಡಿಎ ಅಧ್ಯಕ್ಷ ಬಸವರಾಜ ಜಾಬಶೆಟ್ಟಿ, ಪ್ರಮುಖರಾದ ಬಿ.ಜಿ.ಶೆಟಕಾರ್, ಬಾಬು ವಾಲಿ, ಬಸವರಾಜ ಧನ್ನೂರ, ನಂದಕಿಶೋರ ವರ್ಮಾ, ಸಲಹಾ ಸಮಿತಿ ನಿರ್ದೇಶಕರಾದ ಬಾಬುರಾವ ಕಾರಬಾರಿ, ಹಾವಶೆಟ್ಟಿ ಪಾಟೀಲ್, ಶಂಕರರಾವ ಕೊಟ್ಟರಕಿ, ಸದಾನಂದ ಜೋಶಿ, ರಾಜರಡ್ಡಿ ಶಹಾಬಾದ, ಬಾಬುರಾವ ಮಲ್ಕಾಪುರ, ಜಗನ್ನಾಥ ಜಮಾದಾರ, ಮಾಣಿಕಪ್ಪ ಖಾಶೆಂಪುರ, ಅನೀಲ ಪನ್ನಾಳೆ, ಸಂತೋಷ ರಾಸೂರ, ಮಂಜುನಾಥ ಸುಣಗಾರ, ಅಣವೀರ ಕೊಡಂಬಲ್, ಬ್ಯಾಂಕ್ ಎಮ್‌ಆರ್ ಆನಂದ ಕುಲಕರ್ಣಿ ಇತರರಿದ್ದರು. ನವಲಿಂಗ ಪಾಟೀಲ್ ನಿರೂಪಿಸಿದರು. ಗಾಯಕಿ ಮಹೇಶ್ವರಿ ಪಾಂಚಾಳ ವಚನ ಸಂಗೀತ, ಭಕ್ತಿ ಸುಧೆ ಹರಿಸಿದರು.

ಬೀದರ್‌ನಲ್ಲಿ ಉದ್ಯಮ ಸ್ಥಾಪಿಸಿ

ನಿರಾಣಿ ಗ್ರೂಪ್‌ನಿಂದ ಸಕ್ಕರೆ ಅಥವಾ ಬಯ್ಯಾವುದಾದರೂ ದೊಡ್ಡ ಕಾರ್ಖಾನೆ ಬೀದರ್‌ನಲ್ಲಿ ಸ್ಥಾಪಿಸಬೇಕೆಂದು ಶ್ರೀ ರಾಜೇಶ್ವರ ಶಿವಾಚಾರ್ಯ, ಶಾಸಕರಾದ ಡಾ. ಶೈಲೇಂದ್ರ ಬೆಲ್ದಾಳೆ, ಡಾ.ಸಿದ್ದಲಿಂಗಪ್ಪ ಪಾಟೀಲ್, ಮಾಜಿ ಸಭಾಪತಿ ರಘುನಾಥರಾವ ಮಲ್ಕಾಪುರೆ, ಮಾಜಿ ಶಾಸಕ ಪ್ರಕಾಶ ಖಂಡ್ರೆ ಆಗ್ರಹಿಸಿದರು. ಬೀದರ್‌ನಲ್ಲಿ ಕಬ್ಬು ಹೆಚ್ಚು ಬೆಳೆಯುತ್ತಿದೆ. ನಿತ್ಯ 20–25 ಸಾವಿರ ಟನ್ ಕ್ರಷಿಂಗ್ ಸಾಮರ್ಥ್ಯದ ಸಕ್ಕರೆ ಕಾರ್ಖಾನೆ ಸ್ಥಾಪನೆ ಅಗತ್ಯವಿದೆ. ಇಲ್ಲಿ ದೊಡ್ಡ ಉದ್ಯಮ ಸ್ಥಾಪನೆಗೆ ಪೂರಕ ವಾತಾವರಣವಿದೆ.



ಎಲ್ಲರ ಸಹಕಾರವೂ ಸಿಗಲಿದೆ ಎಂದರು. ಬೇಡಿಕೆಗೆ ಸ್ಪಂದಿಸಿದ ಎಂಎಮ್‌ಸಿ ಹಣಮಂತ ನಿರಾಣಿ, ಈ ಬಗ್ಗೆ ಸಂಸ್ಥೆ ಮುಖ್ಯಸ್ಥ ಮುರುಗೇಶ ನಿರಾಣಿ ಜೊತೆಗೆ ಚರ್ಚಿಸಿ ಮುಂದಿನ ಹೆಜ್ಜೆ ಇಡುವುದಾಗಿ ಸಕಾರಾತ್ಮಕ ಪ್ರತಿಕ್ರಿಯೆ ನೀಡಿದರು.

ಬೀದರ್ ಸಹಕಾರ ಸಕ್ಕರೆ ಕಾರ್ಖಾನೆ ಬಂದ್ ಆಗಿದೆ. ನಾರಂಜಾ ಸಕ್ಕರೆ ಕಾರ್ಖಾನೆ ಯಾವಾಗ ಬಂದ್ ಆಗುತ್ತದೆಯೋ ಗೊತ್ತಿಲ್ಲ. ಮಹಾತ್ಮಗಾಂಧಿ ಸಕ್ಕರೆ ಕಾರ್ಖಾನೆ, ಡಿಸಿಸಿ ಬ್ಯಾಂಕ್ ಸಹ ಅವನತಿ ಅಂಚಿನಲ್ಲಿದ್ದಂತೆ ಕಾಣುತ್ತಿದೆ. ಹೀಗಾಗಿ ನಿರಾಣಿ ಗ್ರೂಪ್ ಬೀದರ್ ಜಿಲ್ಲೆಯ ರೈತರಿಗೆ, ದುಡಿಯುವ ಕೈಗಳಿಗೆ ಕೆಲಸ ಕೊಡಲು ದೊಡ್ಡ ಉದ್ಯಮ ಸ್ಥಾಪಿಸುವ ಜರೂರಿಯಿದೆ.

–ರಘುನಾಥರಾವ ಮಲ್ಕಾಪುರೆ,
ಪರಿಷತ್ ಮಾಜಿ ಸಭಾಪತಿ

**Owned, and published by SYED AHAMAD HUSSAINI MATWALE from Ward No,21 S S Matwale Hussaini Saheb Dargha, Jummal Doddi, Po-Manvi,Raichur, Karnataka -584123.**
**Printed at Hulkoti, New Court, Opposite Plot No, 28, RS No 312/3B, Garag Complex, Gadag, Karnataka-582101 Editor: SYED AHAMAD HUSSAINI MATWALE**